ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ ೨೪ನೇ ಫೆಬ್ರವರಿ ೧೯೯೨, ಫಾಲ್ಗುಣ ೫, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಸ್.ಎಂ. ಕೃಷ್ಣ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚಕ ನಿರ್ಣಯಗಳು

ಅಧ್ಯಕ್ಷರು: ಸಚಿವರಾಗಿದ್ದ ಶ್ರೀ ಕೆ.ಹೆಚ್. ಪಾಟೀಲ್ ಹಾಗೂ ಹಾಲಿ ಶಾಸಕರಾಗಿದ್ದ ಶ್ರೀ ಬಾಬುಸಾಹೇಬ್ ರಾವ್‌ಸಾಹೇಬ್ ಮಹಾಗಾಂವ್‌ಕರ್‌ರವರ ನಿಧನದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಸಹಕಾರಿ ರಂಗದ ಮೂಲತತ್ವಗಳ ಅನುಷ್ಠಾನಕ್ಕೆ ಸತತವಾಗಿ ಶ್ರಮಿಸಿದ ರಾಜಕಾರಣಿ, ವಿದ್ಯಾಭಿಮಾನಿ, ಪತ್ರಕರ್ತ, ಸಾಮಾಜಿಕ ಸೇವಾಕರ್ತ, ಕೃಷಿಕ ಮುಖಂಡ, ಪ್ರಸ್ತುತ ಸಚಿವ ಸಂಪುಟದ ಹಿರಿಯ ಸಚಿವ ಶ್ರೀ ಕೃಷ್ಣಗೌಡ ಹನುಮಂತಗೌಡ ಪಾಟೀಲರು ಇದೇ ತಿಂಗಳ ಒಂಭತ್ತನೆ ತಾರೀಖು ದೈವಾಧೀನರಾದರು. ನಾಲ್ಕು ಸಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು, ಮೂರು ಬಾರಿ ಸಚಿವರಾಗಿ, ತಮಗೆ ಪ್ರಿಯವಾಗಿದ್ದ ಸಹಕಾರ, ಕೃಷಿ, ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮೊದಲಾದ ಖಾತೆಗಳನ್ನು ಅತ್ಯಂತ ದಕ್ಷತೆಯಿಂದ ನಿಭಾಯಿಸಿ, ಜನಮನ ಗೆದ್ದು, ಅವರ ಅಪಾರ ಪ್ರೀತಿ ವಾತ್ಸಲ್ಯಗಳನ್ನು ಗಳಿಸಿಕೊಂಡಿದ್ದವರು ಶ್ರೀ ಪಾಟೀಲ್.

ಶ್ರೀ ಕೆ.ಹೆಚ್. ಪಾಟೀಲ್‌ರದು ವೈವಿಧ್ಯಮಯವಾದ ವರ್ಣಮಯ ವ್ಯಕ್ತಿತ್ವ, ಹುಲಿಕೋಟೆಯ ಹುಲಿಯೆಂದೆ ಜನಪ್ರಿಯರಾಗಿದ್ದ ಅವರು ಕಟ್ಟಿದ ಸಹಕಾರಿ ಹಾಗೂ ಶೈಕ್ಷಣಿಕ ಸಂಘ ಸಂಸ್ಥೆಗಳು, ವಹಿಸಿದ್ದ ಸ್ಥಾನಗಳು ಅನೇಕ. ಒಂದು ಸಹಕಾರಿ ಕ್ರಾಂತಿಯನ್ನೇ ಉಂಟು ಮಾಡಿ, ಅಂದಿನ ಪುಟ್ಟ ಹಳ್ಳಿ ಹುಲಿಕೋಟೆಗೆ ಸಹಕಾರಿ ಭೂಪಟದಲ್ಲಿ ಒಂದು ಶಾಶ್ವತ ಸ್ಥಾನ ದೊರಕುವಂತೆ ಮಾಡಿದ ಕಾರಣ ಪುರುಷರವರು. ಅವರು ಹೆಸರು ಮಾಡಿದ್ದು, ರಾಜಕೀಯಕ್ಕಿಂತ ಈ ಕ್ಷೇತ್ರದಲ್ಲೇ, ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಿದ ಅಪರೂಪದ ವ್ಯಕ್ತಿಗಳ ಗುಂಪಿಗೆ ಶ್ರೀ ಪಾಟೀಲ್‌ರವರು ಸೇರಿದವರು ಈ ಮಹನೀಯರು. ಕರ್ನಾಟಕ ಕಾಂಗ್ರೆಸ್ (ಐ) ಸಮಿತಿ, ಹುಲಿಕೋಟೆಯ ಸಹಕಾರಿ ಶಿಕ್ಷಣ ಸಂಸ್ಥೆ ಹಾಗೂ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿ, ಧಾರವಾಡದ ರೆಡ್ಡಿ ಶೈಕ್ಷಣಿಕ ಹಾಗೂ ಸಾಮಾಜಿಕ ಲೀಗ್‌ನ ಗೌರವ ಕಾರ್ಯದರ್ಶಿಗಳಾಗಿ, ಹಲವಾರು ಶಿಶುವಿಹಾರಗಳ, ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳ, ವಿದ್ಯಾರ್ಥಿ ನಿಲಯಗಳ ಹಾಗೂ ಸಹಕಾರಿ ಉದ್ಯಮಗಳ ಸ್ಥಾಪಕರಾಗಿ, ಗದಗ ಸಹಕಾರಿ ಸಂಘದ ನಿರ್ವಾಹಕ ನಿರ್ದೇಶಕರಾಗಿ, ಕೃಷಿಕ ಸಂಘಟಿಕರಾಗಿ, ಹುಬ್ಬಳ್ಳಿಯ ವಿಶಾಲ ಕರ್ನಾಟಕದ ಸ್ಥಾಪಕ ಹಾಗೂ ಸಂಪಾದಕರಾಗಿ, ಸಮಾಜದ

ಸರ್ವಾಂಗೀಣ ಪ್ರಗತಿಗಾಗಿ ನಿರ್ಭೀತಿಯಿಂದ ತಮ್ಮ ಆರೋಗ್ಯವನ್ನು ಕಡೆಗಾಣಿಸಿ ಪ್ರಾಮಾಣಿಕವಾಗಿ ದುಡಿದ ಮಹನೀಯರು.

ಶ್ರೀ ಪಾಟೀಲರ ಸ್ಥಾನ ರಾಜಕೀಯ ಕ್ಷೇತ್ರದಲ್ಲೂ ವಿಶಿಷ್ಟವಾದದ್ದು, ಅಪರೂಪವಾದದ್ದು. ತಮ್ಮ ಪಕ್ಷಕ್ಕೆ ನಿಷ್ಠರಾಗಿದ್ದವರು. ನಿಷ್ಠೂರ ಕಟ್ಟಿಕೊಂಡರೂ ತತ್ವ ಬಿಡದಿದ್ದವರು. ತತ್ವಕ್ಕಾಗಿ ಸತತ ಹೋರಾಟ ನಡೆಸಿದವರು. ಸದಾ ಚಟುವಟಿಕೆಯಿಂದ ಇದ್ದ ಅವರ ಆಡಳಿತ ದಕ್ಷತೆ ಹಾಗೂ ಪ್ರಾಮಾಣಿಕತೆ ಅಚ್ಚರಿ ತರುವಂತಹವು. ಅವರ ಕೆಲಸದ ವೇಗ ಅನುಕರಣೀಯ. ಜನಸಾಮಾನ್ಯರ ಬಗ್ಗೆ ಅವರಿಗಿದ್ದ ಕಳಕಳಿ ಅಸಾಮಾನ್ಯ. 1972 ರಿಂದಲೂ ನನಗೆ ಆತ್ಮೀಯರಾಗಿದ್ದ ಶ್ರೀ ಪಾಟೀಲರ ವ್ಯಕ್ತಿತ್ವ ಸರ್ವ ವಿಧದಲ್ಲೂ ಅಸಾಧಾರಣ. ಇವರ ಅಗಲುವಿಕೆ ನನಗೆ ವೈಯುಕ್ತಿಕ ನಷ್ಟವೂ ಹೌದು.

ಮುಚ್ಚುಮರೆಯಿಲ್ಲದೆ ಬಿಚ್ಚು ಹೃದಯದ ಪಾಟೀಲರು ತಮಗೆ ಸರಿಕಂಡಿದ್ದನ್ನು ನೇರವಾಗಿ ನುಡಿದು, ಅಂತೆಯೇ ನಡೆದು, ಆರ್ಥಿಕ ಹಾಗೂ ಸಾಮಾಜಿಕ ಸ್ವಾವಲಂಬನೆಗಾಗಿ ತಮ್ಮ ಜೀವಿತವಿಡಿ ದುಡಿದು, ನಮ್ಮನ್ನಗಲಿ, ಇತಿಹಾಸದ ಪುಟಗಳನ್ನು ಸೇರಿದ್ದಾರೆ. ಇವರ ನಿಧನದಿಂದ ರಾಜ್ಯ ಒಬ್ಬ ಪ್ರಾಮಾಣಿಕ, ಧೀಮಂತ ನಾಯಕನ ಸೇವೆಯಿಂದ ವಂಚಿತವಾಗಿದೆ.

2. ಪ್ರಸ್ತುತ ವಿಧಾನಸಭೆಯ ಸದಸ್ಯರು ಹಾಗೂ ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷರು ಆಗಿದ್ದ ಶ್ರೀ ಬಾಬು ಸಾಹೇಬ್ ರಾವ್ ಸಾಹೇಬ್ ಮಹಾಗಾಂವಕರ್‌ರವರು ದಿನಾಂಕ 26-12-1991 ರಂದು ನಿಧನರಾದರು. ಶ್ರೀಯುತರು 1989ನೇ ನವೆಂಬರ್‌ನಲ್ಲಿ 9ನೇ ವಿಧಾನ ಸಭೆಗೆ ಆಯ್ಕೆಯಾಗಿ ಬೆಳಗಾಂ ಕ್ಷೇತ್ರದ ಪ್ರಗತಿಗಾಗಿ ಶ್ರಮಿಸಿದ್ದಾರೆ. ವೃತ್ತಿಯಲ್ಲಿ ಕೃಷಿಕರೂ, ಸಾರಿಗೆ ಉದ್ಯಮಿಗಳು ಆಗಿದ್ದ ಶ್ರೀಯುತರು ಕ್ರೀಡೆ, ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತರಾಗಿದ್ದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅದರಲ್ಲೂ ಶೈಕ್ಷಣಿಕ ಕ್ಷೇತ್ರದಲ್ಲಿ ಅವಿರತವಾಗಿ ದುಡಿದರಲ್ಲದೆ, ಮರಾಠ ಮಂಡಳಿ ಹಾಗೂ ಜ್ಯೋತಿ ಕಾಲೇಜಿನ ಟ್ರಸ್ಟಿಯಾಗಿ ಸ್ಮರಣೀಯ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದು.

+ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಅತ್ಯಂತ ಹಿರಿಯ ರಾಜಕಾರಣಿ ಒಬ್ಬರನ್ನು ಕಳೆದುಕೊಂಡಿರತಕ್ಕಂಥ ಸಂದರ್ಭದಲ್ಲಿ ಅವರ ಸ್ಮರಣಾರ್ಥವಾಗಿ ನಾವು ಎದ್ದು ನಿಲ್ಲುವ ಸಂದರ್ಭವೊಂದು ನಮಗೆ ಒದಗಿದೆ. 1967ರಿಂದ ಈ ಸದನದ ಸದಸ್ಯರಾಗಿ ನಾವು ರಾಜಕೀಯಕ್ಕೆ ಬಂದವರು. ಅವರೂ ಕೂಡ 1967ರಲ್ಲಿ ಮೊಟ್ಟ ಮೊದಲಬಾರಿಗೆ ಈ ಶಾಸನ ಸಭೆಗೆ ಆಯ್ಕೆಯಾಗಿ ಬಂದರು. ನಾವೂ, ದಿವಂಗತ ಗೋಪಾಲ ಗೌಡರು, ಸಾಹುಕಾರ್ ಚೆನ್ನಯ್ಯನವರು, ಹೆಚ್.ಎಂ. ಚೆನ್ನಬಸಪ್ಪನವರು, ಎನ್. ಶಿವಪ್ಪನವರು, ಸಿದ್ದವೀರಪ್ಪನವರು ಇಂಥಾ ಘಟಾನುಘಟಿಗಳು ಇದ್ದಂಥ ಸಂದರ್ಭದಲ್ಲಿ ಅವರು ಕೂಡ ಬಂದರು. ನನಗೆ ಇನ್ನೂ ಕೂಡ ನೆನಪಿದೆ. ಅಲ್ಲಿರುವ 3ನೇ ಸಾಲಿನಲ್ಲಿ ಮೊಟ್ಟಮೊದಲ ಬಾರಿಗೆ ಅವರು ಕುಳಿತುಕೊಳ್ಳುತ್ತಿದ್ದರು. ನಾವೂ, ಅಜೀಜ್ ಸೇಠ್‌ರವರು ಹಿಂದುಗಡೆ ಕುಳಿತುಕೊಳ್ಳುತ್ತಿದ್ದೆವು. ಈಗ ಅವರು ಕುಳಿತುಕೊಂಡಿರತಕ್ಕ ಜಾಗ ನಮ್ಮದು. ಆ ಕಾಲದಲ್ಲಿ ನಾವು ಹೊಸಬರು. ವಿಧಿ ವಿಧಾನಗಳ ಅನುಭವ ಇಲ್ಲದೆ ಇದ್ದ ಸದಸ್ಯರಾಗಿ ಅನುಭವ ಪಡೆಯತಕ್ಕಂಥ ಸಂದರ್ಭ ಅದಾಗಿತ್ತು. ಆದರೆ ಶ್ರೀ ಕೆ.ಹೆಚ್. ಪಾಟೀಲರಿಗೆ ಹಾಗಿರಲಿಲ್ಲ. ಆಗ ಶ್ರೀಮಾನ್ ವೈಕುಂಠ ಬಾಳಿಗಾರವರು ತಮ್ಮ ಸ್ಥಾನದಲ್ಲಿ ಕುಳಿತಿದ್ದಂಥ ಸಂದರ್ಭ. ತಮ್ಮ ಹಾಗೆಯೇ ಅತ್ಯಂತ ಗೌರವವನ್ನು ಅವರು ಸದನದಲ್ಲಿ ಹೊಂದಿದ್ದರು. ಶ್ರೀ ಬಾಳಿಗಾರವರು ಒಂದು ಮಾತನ್ನು ಹೇಳಿದಾಗ, ಅಂದರೆ ಪಾಟೀಲರು ಪಟ್ಟುಹಿಡಿದ

ಸಂದರ್ಭದಲ್ಲಿ ತಮ್ಮ ಸ್ಥಾನದಿಂದ ಒಂದು ವಿಚಾರ ಬಂತು ಎಂದರೆ ಅದಕ್ಕೆ ಅಪಾರವಾದ ಗೌರವವನ್ನು ಕೊಟ್ಟು ಕುಳಿತುಕೊಳ್ಳತಕ್ಕಂಥ ಔದಾರ್ಯತೆ, ದೊಡ್ಡ ಗುಣ ಇವೆಲ್ಲವೂ ಅವರಲ್ಲಿ ಇದ್ದವು. ಅವರು ಸದನದ ನಡವಳಿಕೆಯನ್ನು ಸರಿದೂಗತಕ್ಕಂಥ, ಒಪ್ಪತಕ್ಕಂಥ ಮಾದರಿಯಲ್ಲಿ ನಿರ್ವಹಣೆ ಮಾಡುತ್ತಿದ್ದುದು ನನ್ನ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದೇ ಉಳಿದಿದೆ.

ಅದೇ ರೀತಿಯಾಗಿ ಅನೇಕ ಜನ ಹಿರಿಯ ಮಾನ್ಯ ಸದಸ್ಯರುಗಳನ್ನು ಆ ಸಂದರ್ಭದಲ್ಲಿ ಕಾಣತಕ್ಕ ಒಂದು ಸುಯೋಗ ನಮಗೆಲ್ಲ ಒದಗಿ ಬಂದಿತ್ತು. ಮಾನ್ಯ ಪಾಟೀಲರು ಆ ರೀತಿಯಾಗಿ ಮೊಟ್ಟಮೊದಲನೆಯದಾಗಿ ಬಂದರೂ ಕೂಡ ಅವರು ಆ ನಡವಳಿಕೆ ಪಡೆಯುವುದಕ್ಕೆ ಕಾರಣ ಏನು ಎಂದರೆ, ತಾವು ಹೇಳಿದ ಹಾಗೆ ಈ ಸದನಕ್ಕೆ ಅವರು ಹೊಸದಾಗಿ 1967ರಲ್ಲಿ ಆಯ್ಕೆ ಆಗಿ ಬಂದಿರಬಹುದು. ಅದಕ್ಕೂ ಮೊದಲು ರಾಜಕಾರಣದಲ್ಲಿ ಅಥವಾ ಕ್ಷೇತ್ರದಲ್ಲಿ ಹಲವಾರು ವಿಚಾರಗಳ ಬಗ್ಗೆ ಅವರು ದುಡಿದು ಬಂದಂಥವರು. ಅವರು ಜೀವನದಲ್ಲಿ ಏರುಪೇರುಗಳನ್ನು ಕಂಡಂಥವರು, ಉಬ್ಬು ತಗ್ಗುಗಳನ್ನು ನೋಡಿರತಕ್ಕವರು, ಹೋರಾಟದಲ್ಲಿ ಬಂದಿರತಕ್ಕವರು. ಅದಕ್ಕಾಗಿ ಈ ಕಾನೂನು, ವಿಧಿ, ನಿಯಮ-ಇವುಗಳನ್ನೆಲ್ಲಾ ನೋಡತಕ್ಕ ಒಂದು ಮೂಲಭೂತವಾದ ಬುದ್ಧಿವಂತಿಕೆ ಅವರಲ್ಲಿ ಅಡಗಿತ್ತು. ಅದು ಆ ಸಂದರ್ಭದಲ್ಲಿ ಈ ಸದನಕ್ಕೆ ಬಹಳ ಸದುಪಯೋಗ ಆಯಿತು ಎನ್ನತಕ್ಕದ್ದು ನನ್ನ ಭಾವನೆ. ನಾನು ಯಾವುದೇ ಸಂದರ್ಭದಲ್ಲೂ ನೋಡಲಿಲ್ಲ. ಏನೆಂದರೆ, ಅಧ್ಯಕ್ಷರ ಜೊತೆ ವಿಷಯದ ಮೇಲೆ ಕೆಲವು ಕಾಲ ವಾದಕ್ಕೆ ಇಳಿದರೂ ಕೂಡ ಅದು ಹರಿದು ಹೋಗುವವರೆಗೆ ತೆಗೆದುಕೊಂಡು ಹೋಗತಕ್ಕದ್ದನ್ನು ನಾನು ಕಾಣಲೇ ಇಲ್ಲ. ಜೀವಮಾನದಲ್ಲಿ ಕಾಣಲಿಲ್ಲ. ತಾವು ನಿಕಟವರ್ತಿಗಳಾಗಿರತಕ್ಕವರು, ತಾವು ಕೂಡ ನಿಕಟವರ್ತಿಗಳನ್ನು ನೋಡಿರತಕ್ಕಂಥವರು. ಅವರು ಆ ಕಡೆ ಅಥವಾ ಈ ಕಡೆ ಕುಳಿತಿದ್ದಂತಹ ಕಾಲದಲ್ಲಿ ಆಗಲೀ ಅಥವಾ ಸ್ನೇಹದಲ್ಲಿ ಮಾತನಾಡತಕ್ಕ ಸಂದರ್ಭ ಬಂದರೂ ಕೂಡ ತಮ್ಮ ವಿಚಾರಧಾರೆಯನ್ನು ಎಂದಿಗೂ ಬಲಿಕೊಡದವರು. ಆದರೆ ಬಹು ಅಭಿಪ್ರಾಯ ಅಲ್ಲಿ ಬಂದುಬಿಟ್ಟರೆ ತಕ್ಷಣ ಬಿಟ್ಟು ಕೊಟ್ಟು ಅದಕ್ಕಾಗಿ ಅಡ್ಜಸ್ಟ್ ಆಗಿ ಹೋಗತಕ್ಕಂಥ ಒಂದು ಔದಾರ್ಯತೆ ಅವರಲ್ಲಿ ಅಡಗಿತ್ತು. ನಾನು ಅದನ್ನು ಅವರಲ್ಲಿ ಸ್ಪಷ್ಟವಾಗಿ ಕೊನೆಯ ಹಂತದವರೆಗೆ ಕಂಡಿದ್ದೇನೆ. ನಾನು ಮುಖ್ಯಮಂತ್ರಿಯಾಗಿಯೂ ನೋಡಿದ್ದೇನೆ. ಅವರು ನನಗೆ ವಯಸ್ಸಿನಲ್ಲಿ ಅತ್ಯಂತ ಹಿರಿಯರಾಗಿದ್ದವರು. ನಾನು ಎಂದೂ ಕೂಡ ಅವರ ಗೌರವಕ್ಕೆ ಚ್ಯುತಿ ಬಾರದ ಹಾಗೆ ನೋಡಿಕೊಂಡು ಬಂದಿದ್ದೇನೆ. ನಮ್ಮ ಮಿತ್ರರೆಲ್ಲರಿಗೂ ಅದು ಗೊತ್ತಿದೆ. ಮೊನ್ನೆಯವರೆಗೆ ಕೂಡ ಗೊತ್ತಿದೆ. ರಾಜಕಾರಣದಲ್ಲಿ ಒಂದು ಹಂತದಲ್ಲಿ ಇವೆಲ್ಲ ಬರುತ್ತಿರುತ್ತವೆ, ಹೋಗುತ್ತಿರುತ್ತವೆ. ಇದು ವ್ಯಕ್ತಿ ವ್ಯಕ್ತಿಗೆ ಕೊಡತಕ್ಕ ಗೌರವ, ಹಿರಿತನಕ್ಕೆ ಕೊಡತಕ್ಕ ಗೌರವ. ಅದಕ್ಕೆ ಚ್ಯುತಿ ತರಬಾರದು. ಯಾವುದೇ ಒಂದು ವಿಚಾರ ಮನಸ್ಸಿನಲ್ಲಿ ಇಟ್ಟುಕೊಂಡು ಗೌರವಕ್ಕೆ ಚ್ಯುತಿ ತಂದರೆ ಅದು ಒಳ್ಳೆಯ ರಾಜಕಾರಣಕ್ಕೆ ಪೆಟ್ಟು ಬೀಳುತ್ತದೆ ಎನ್ನತಕ್ಕ ಒಂದು ನೀತಿಯ ಪ್ರಶ್ನೆ ಅಲ್ಲಿ ಅಡಗಿದೆ ಎನ್ನತಕ್ಕ ಭಾವನೆ ಇಟ್ಟುಕೊಂಡಿರತಕ್ಕ ರಾಜಕಾರಣಿಗಳಲ್ಲಿ ನಾನು ಕೂಡ ಒಬ್ಬನಾಗಿದ್ದೇನೆ. ಈ ಭಾವನೆಯನ್ನು ಇಟ್ಟುಕೊಂಡಂತಹವನಾಗಿ ನಾನು ಈ ಮಾತನ್ನು ಆಡುತ್ತಿದ್ದೇನೆ. ಅವರು ಗೌರವವನ್ನು ಪಡೆಯುವುದಕ್ಕೆ ಈ ಒಂದು ಗುಣ ವಿಶೇಷಗಳು ಅವರಲ್ಲಿ ಹೆಚ್ಚಾಗಿ ಅಡಕವಾಗಿದ್ದುವು. ತಾವು ಹೇಳಿದ ಹಾಗೆ ಸಹಕಾರಿ ಕ್ಷೇತ್ರದಲ್ಲಿ ಅವರು ಎತ್ತಿದ ಕೈ. ನಾನು ಅವರ ಊರಿಗೆ ಹೋಗಿರತಕ್ಕದ್ದು ಮೂರನೆಯ ಸಾರಿ. ಮೊದಲನೆಯ ಸಲ ನಾನು ಶಾಸಕನಾಗಿದ್ದ ಕಾಲದಲ್ಲಿ ಒಂದು ಸಾರಿ ಹುಲಿಕೋಟೆಗೆ ಹೋಗಿದ್ದೆ. ಅವರು ಹುಲಿಕೋಟೆಯ ಹುಲಿ ಅವರು ನಿಜವಾಗಿಯೂ ಬಗ್ಗತಕ್ಕ, ಜಗ್ಗತಕ್ಕ ವ್ಯಕ್ತಿ

ಅಲ್ಲವೇ ಅಲ್ಲ. ಸಹಕಾರಿ ಕ್ಷೇತ್ರದ ವಿಷಯ ಮಾತ್ರ ಅವರಿಗೆ 'ಅಂಗೈಯಲ್ಲಿ ನೆಲ್ಲಿ ಕಾಯಿ' ಇದ್ದ ಹಾಗೆ. ಸಪಕಾರಿ ಕ್ಷೇತ್ರದ ಪೂರ್ತಿ ವಿಷಯಗಳು ಆಪಾದ ಮಸ್ತಕವಾಗಿ ಅವರಿಗೆ ಎಲ್ಲಾ ಸಿದ್ಧಹಸ್ತವಾಗಿದ್ದವು. ಹಾಗಾಗಿ ಅವರು ಅದರ ಒಂದು ಸದುಪಯೋಗವನ್ನು ಸಂಪೂರ್ಣವಾಗಿ ಪಡೆದರು ಹಾಗೂ ಪ್ರಾಮಾಣಿಕವಾಗಿ ಪಡೆದರು. ಅಲ್ಲಿರುವ ಸಂಸ್ಥೆಯನ್ನು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಸಾವಿರಾರು ಜನರಿಗೆ ಉದ್ಯೋಗ ಸಿಕ್ಕಿದ್ದನ್ನು ನಾವು ನೋಡಿದರೆ ನಿಜವಾಗಿಯೂ ಬಹಳ ಸಂತೋಷವಾಗುತ್ತದೆ. ನಾನು ಮುಖ್ಯಮಂತ್ರಿಯಾದ ಮೇಲೆ ಚುನಾವಣೆಯ ಕಾಲದಲ್ಲಿ ನನ್ನನ್ನು ಅವರು ಕರೆದುಕೊಂಡು ಹೋದರು. ರಾತ್ರಿ ಬಹಳ ತಡವಾಗಿತ್ತು. ಇಷ್ಟಾದರೂ ಕೂಡ ಸಾಧ್ಯ ಇದ್ದರೆ ಹೋಗೋಣ ಎಂದರು. ನಾನೂ ಹೋಗೋಣ ಎಂದೆ. ಏಕೆಂದರೆ ಅವರು ಸಹಕಾರಿ ಕ್ಷೇತ್ರಗಳ ದಿಗ್ಗಜಗಳಲ್ಲಿ ಒಬ್ಬರಾಗಿದ್ದವರು. ಅವರು ಕಟ್ಟಿರತಕ್ಕ ಮಹಾನ್ ಸಂಸ್ಥೆಯನ್ನು ನೋಡಬೇಕೆಂಬ ಹಿರಿಯ ಇಚ್ಛೆ ನನ್ನಲ್ಲೂ ಕೂಡ ಅಡಗಿತ್ತು. ನಾನು ಅದಕ್ಕಾಗಿ ಹೋದೆ. ಹೋಗಿ ಸುಮಾರು ಎರಡು ಗಂಟೆಗಳ ಕಾಲ ನಾವೆಲ್ಲಾ ಅಲ್ಲಿ ಕಳೆದೆವು. ಆಮೇಲೆ ನಾವು ಬಹಿರಂಗ ಸಭೆಗೆ ಹೋದೆವು. ಚುನಾವಣಾ ಪ್ರಚಾರಕ್ಕೆ ಹೋಗಿರತಕ್ಕ ಕಾಲದಲ್ಲಿ ಅಲ್ಲಿಗೆ ಹೋಗಿದ್ದೆವು. ಆ ಸಂಸ್ಥೆಯನ್ನು ನೋಡಿಬಿಟ್ಟರೆ ಯಾರಿಗಾದರೂ ಗೊತ್ತಾಗುತ್ತದೆ. ಅವರು ಸಹಕಾರಿ ಕ್ಷೇತ್ರದಲ್ಲಿ ಇಟ್ಟಿರತಕ್ಕ ನಂಬಿಕೆ ಬಗ್ಗೆ, ಸೇವೆ ಬಗ್ಗೆ. ಅವರು ಕಟ್ಟಿರತಕ್ಕ ಮಹಾನ್ ಸಹಕಾರಿ ಸೌಧ ಅದು. ಅದು ಸಣ್ಣವಿಚಾರ ಅಲ್ಲ. ಇಂತಹ ಸಂಸ್ಥೆಯನ್ನು ಅವರು ಕಟ್ಟಿ ಬೆಳೆಸುತ್ತಿದ್ದಾರೆ. ಇದು ನಿಜವಾಗಿ ಕೂಡ ಮಾದರಿಯಾಗಿ ನೋಡತಕ್ಕ ವಿಚಾರ. ಜನಮೆಚ್ಚಿಗೆಯನ್ನು ಪಡೆಯತಕ್ಕ, ಜನ ಮನವನ್ನು ಗೆದ್ದಿರತಕ್ಕಂಥಹ ವಿಚಾರಧಾರೆ ಅವರದ್ದು. ಆ ವಿಚಾರ ಧಾರೆ ಸಹಕಾರಿ ಕ್ಷೇತ್ರದಲ್ಲಿ ಉಲ್ಬಣಗೊಂಡು ಬೆಳೆದು ಅಲ್ಲಿ ನಿಂತಿದೆ. ಎನ್ನುವ ಮಾತನ್ನು ನಾವು ಸ್ಪಷ್ಟವಾಗಿ ಹೇಳಬಹುದು. ಇವತ್ತು ಅವರು ಇಲ್ಲದೇ ಇರಬಹುದು. ಆದರೆ ಅವರ ಜೀವನದ ಸ್ಮಾರಕವಾಗಿ ಇವತ್ತು ಹುಲಿಕೋಟೆಯಲ್ಲಿ ಅದು ನಿಂತಿದೆ. ಅದು ಮತ್ತೊಬ್ಬರು ನೋಡಿ ಕಲಿಯತಕ್ಕ ರೀತಿಯಲ್ಲಿ ಅಥವಾ ಅನುಕರಣೀಯವಾಗಿ ಇವತ್ತು ಉಳಿದಿದೆ. ಎನ್ನತಕ್ಕ ಮಾತು ಸರ್ವ ವಿದಿತ. ಅವರಲ್ಲಿದ್ದ ಒಂದೇ ಒಂದು ವಿಚಾರವೇನೆಂದರೆ, ಯಾವುದೇ ವಿಚಾರ ಬಂದರೂ ಕೂಡ ಅದನ್ನು ಪಟ್ಟಾಗಿ ಹಿಡಿಯತಕ್ಕದ್ದು ಅವರ ಗುಣ. ಒಂದೊಂದು ಸಾರಿ ಶಾಸನಸಭೆಯಲ್ಲಿ ಸಚಿವರಾಗಿದ್ದಾಗಲೂ ಸಹ ಯಾವುದೇ ವಿಚಾರವನ್ನು ವಿಭಿನ್ನವಾಗಿ ಹಿಡಿದಿರತಕ್ಕದ್ದೂ ಉಂಟು.

ಅಲ್ಲದಿದ್ದರೆ ಅವರಿಗೆ ಸಮಾಧಾನವಾಗುತ್ತಿರಲಿಲ್ಲ. ಅದನ್ನು ಹೇಳಿ, ಸರಿ ಎನ್ನತಕ್ಕಂಥ, ಗುರಿ ಒಳ್ಳೆಯದು ಆಗುತ್ತದೆ ಎಂಬ ಒಂದು ನಂಬಿಕೆ ಅದಕ್ಕೆ ಕಾರಣ. ಅಲ್ಲಿ ತಪ್ಪು ತಿಳುವಳಿಕೆಗೆ ಯಾವ ಕಾರಣವೂ ಇರಲಿಲ್ಲ. ನಾವು ಇದನ್ನು ವಿರೋಧಪಕ್ಷದಲ್ಲಿದ್ದಾಗಲೂ ನೋಡಿದ್ದೇವೆ. ಇಲ್ಲಿಯೂ ಅದನ್ನು ಕಂಡಿದ್ದೇವೆ. ಇದಕ್ಕೆಲ್ಲ ಅವರು ಇಟ್ಟಿರತಕ್ಕಂಥ ಒಂದು ಅಪಾರವಾದ ನಂಬಿಕೆ ಕಾರಣವಾಗಿತ್ತು ಎಂಬ ಮಾತನ್ನು ನಾವು ಇಲ್ಲಿ ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯ. ಅಂಥ ಒಬ್ಬ ಮಹಾನ್ ವ್ಯಕ್ತಿ ಇವೊತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಹೇಳಿದ್ದೆ, ಮೊದಲೂ ಕೂಡ ಅವರಿಗೆ ಹೇಳಿದ್ದೆ. ನಿಮಗೆ ಈ ಒಂದು ಸಂದರ್ಭ ತೊಂದರೆಯಾಗುತ್ತಿರಬಹುದು ಎಂಬ ಮಾತನ್ನು ಅವರಿಗೆ ಹೇಳಿದ್ದೆ. ಒಮ್ಮೆ ನಾನು ಗದಗ್‌ಗೆ ಹೋಗಿದ್ದೆ. ಅಲ್ಲಿ ಕುರುಡರ ಬಗ್ಗೆ ಒಂದು ಸಂಗೀತ ಶಾಲೆ ಇದೆ. ಅಲ್ಲಿನ ಪಂಚಾಕ್ಷರಿ ಗವಾಯಿಯವರು ನನಗೆ ಹೇಳಿ ಕಳುಹಿಸಿದ್ದರು. ನಾನು ಅವರ ಕರೆಯನ್ನು ಮನ್ನಿಸಿ ಅಲ್ಲಿಗೆ ಹೋಗುವಾಗಲೇ 12 ಗಂಟೆ ಆಗಿತ್ತು. ಮುಖ್ಯಮಂತ್ರಿಗಳು ಬರುತ್ತಾರೆ ಎಂದ ಮೇಲೆ ಸಹಜವಾಗಿಯೇ ಅಲ್ಲಿ ಶಾಸಕಮಿತ್ರರು, ಮಂತ್ರಿಗಳವರು

ಇನ್ನಿತರ ಎಲ್ಲ ಮಹನೀಯರುಗಳು ಇದ್ದರು. ನಾನು ಆ ಸಂಗೀತ ಕಾರ್ಯಕ್ರಮದಲ್ಲಿ ರಾತ್ರಿ 3-30 ಗಂಟೆಯವರೆಗೂ ಕುಳಿತುಕೊಂಡಿದ್ದೆ. ನನಗೆ ಸಂಗೀತದಲ್ಲಿ ಸ್ವಲ್ಪ ಹೆಚ್ಚಿನ ಅಭಿರುಚಿ ಇದೆ. ಆಗ ಮಾನ್ಯ ಪಾಟೀಲರು ಕೂಡ ನಮ್ಮ ಜೊತೆಗೆ ಕುಳಿತಿದ್ದರು. ನಾನು ಅವರನ್ನು ಹೋಗಿ ವಿಶ್ರಾಂತಿ ಪಡೆಯುವಂತೆ ವಿನಂತಿಸಿಕೊಂಡೆ. ಆದರೂ ಕೂಡ ಅವರು ಕೊನೆಯವರೆಗೂ ಕುಳಿತಿದ್ದರು. ಕುಳಿತುಕೊಂಡೇ ಸ್ವಲ್ಪ ವಿಶ್ರಮಿಸುತ್ತಿದ್ದರು. ಆ ಸಭೆಯಲ್ಲಿ ಸುಮಾರು 40-50 ಸಾವಿರ ಜನರು ಉಪಸ್ಥಿತರಿದ್ದರು. ಅಷ್ಟೊಂದು ಜನಸ್ತೋಮ ಹಾಜರಿರುವಾಗ ತಾನು ಎದ್ದು ಹೋಗಬಾರದು ಎಂಬ ಒಂದು ಕರ್ತವ್ಯ ಪ್ರಜ್ಞೆಯಿಂದಾಗಿ ಅವರು ಸಭೆಯನ್ನು ಬಿಟ್ಟು ಹೋಗಲಿಲ್ಲ. ತಾವು ಕುಳಿತುಕೊಂಡು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಆ ಸಂದರ್ಭದಲ್ಲಿ ಒಂದು ಮಾತನ್ನು ಅವರು ಹೇಳಿದ್ದು ನನ್ನ ನೆನಪಿನಲ್ಲಿದೆ. ನನಗೂ ಸಂಗೀತಕ್ಕೂ ಸ್ವಲ್ಪ ದೂರ ಎಂಬ ಮಾತನ್ನು ಆಗ ಅವರು ಹೇಳಿದ್ದನ್ನು ಇಲ್ಲಿ ನಾನು ಜ್ಞಾಪಿಸಿಕೊಳ್ಳುತ್ತೇನೆ. ಮನಸ್ಸಿನಲ್ಲಿ ಇದ್ದುದನ್ನು ನೇರವಾಗಿ ಹೇಳತಕ್ಕಂಥ ಸ್ವಭಾವದವರು ಮಾನ್ಯ ಪಾಟೀಲರು. ಅಂಥ ಒಬ್ಬ ವ್ಯಕ್ತಿ ಇವೊತ್ತು ನಮ್ಮೆಲ್ಲರನ್ನು ಅಗಲಿದ್ದಾರೆ. ಅವರ ಅಗಲುವಿಕೆಯು ವೈಯಕ್ತಿಕವಾಗಿ ಉಂಟಾದ ನಷ್ಟ, ಸಹಕಾರಿ ಕ್ಷೇತ್ರಕ್ಕೆ, ರಾಜಕೀಯ ಕ್ಷೇತ್ರಕ್ಕೆ, ವಿದ್ಯಾಕ್ಷೇತ್ರಕ್ಕೆ, ಅಲ್ಲದೆ ಹಲವಾರು ಕ್ಷೇತ್ರಗಳಿಗೆ ತುಂಬಲಾರದ ನಷ್ಟವನ್ನು ಉಂಟುಮಾಡಿದೆ. ಅವರ ಆತ್ಮಕ್ಕೆ ಚಿರಶಾಂತಿಯು ದೊರಕಲಿ ಎಂದು ಪ್ರಾರ್ಥಿಸುತ್ತೇನೆ. ಅವರ ಅಗಲುವಿಕೆಯಿಂದ ಉಂಟಾದ ನೋವನ್ನು ತಡೆದುಕೊಳ್ಳುವಂಥ ಶಕ್ತಿ . ಅವರ ಕುಟುಂಬವರ್ಗದವರಿಗೆ ದೊರಕಲಿ ಎಂದು ಪ್ರಾರ್ಥಿಸುತ್ತೇನೆ. ದಿವಂಗತ ಪಾಟೀಲ್‌ರವರ ಅಂತ್ಯಸಂಸ್ಕಾರಕ್ಕೆ ರಾಜ್ಯದ ಹಾಗೂ ಇತರ ಕಡೆಗಳಿಂದ ಸಹಸ್ರಾರು ಜನರು ಹೋಗಿ ತಮ್ಮ ಅಂತಿಮ ನಮನವನ್ನು ಸಲ್ಲಿಸಿದ್ದಾರೆ. ಅಲ್ಲಿ ಹಾಜರಿದ್ದ ಜನಸ್ತೋಮವನ್ನು ನೋಡಿದಾಗ ಅವರ ಜನಪ್ರಿಯತೆ ಎಷ್ಟಿತ್ತು ಎಂಬುದು ಅರಿವಾಗುತ್ತದೆ. ಅಲ್ಲಿ ನಾವು ಊಹಿಸಲಾರದಷ್ಟು ಜನಸ್ತೋಮ ಸೇರಿತ್ತು. ಎಷ್ಟೋ ಜನರು ಅಗಲಿದ ನಾಯಕನಿಗೆ ಕಣ್ಣೀರು ಸುರಿಸಿ ಗೌರವ ಸೂಚಿಸುತ್ತಿದ್ದರು. ಆ ಒಂದು ಸಂದರ್ಭ ನಮ್ಮಲ್ಲಿ ಅಚಲವಾಗಿ ಉಳಿದುಕೊಂಡಿದೆ. ಅಂಥ ಒಬ್ಬ ಮಹಾನ್ ವ್ಯಕ್ತಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ನಮ್ಮನ್ನು ಅಗಲಿದ ಇನ್ನೊಬ್ಬ ಮಾನ್ಯ ಸದಸ್ಯರಾಗಿದ್ದ ಶ್ರೀ ಬಾಬು ಸಾಹೇಬ್ ರಾವ್ ಸಾಹೇಬ್ ಮಹಾಗಾಂವಕರ್‌ರವರು ಕೂಡ ಜನಪ್ರಿಯರು, ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾಗಿದ್ದವರು. ಪಕ್ಷ, ಪಂಗಡ, ವಿಭಿನ್ನವಾಗಿರತಕ್ಕಂಥ ವ್ಯವಸ್ಥೆಯು ನಮ್ಮ ಪ್ರಜಾಪ್ರಭುತ್ವದಲ್ಲಿ ಇದೆ. ಆದ್ದರಿಂದ ತಪ್ಪು ಗ್ರಹಿಕೆಗೆ ಯಾವುದೇ ಕಾರಣ ಇಲ್ಲ. ಈ ಸಭೆಗೆ ಅತ್ಯಂತ ಗೌರವಯುತವಾಗಿ ನಡೆದುಕೊಂಡಿರತಕ್ಕಂಥವರು ಮಾನ್ಯ ಮಹಾಗಾಂವ್‌ಕರ್‌ರವರು. ಅವರು ಈ ಸಭೆಗೆ ಹೊಸದಾಗಿ ಬಂದಿದ್ದರೂ ಕೂಡ ಸಭೆಗೆ, ಸದನಕ್ಕೆ ಸದಾಕಾಲವೂ ಗೌರವಯುತವಾಗಿದ್ದುಕೊಂಡರು, ಅವರು ನಮ್ಮನ್ನು ಇಂದು ಅಗಲಿ ಹೋಗಿದ್ದಾರೆ. ಅವರು ಹಲವಾರು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರತಕ್ಕಂಥಾದ್ದನ್ನು ನಾನು ಅಷ್ಟಾಗಿ ತಿಳಿದುಕೊಂಡಿರಲಿಲ್ಲ. ಅವರು ಹಲವಾರು ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದು ಜನಸೇವೆಯನ್ನು ಮಾಡಿರತಕ್ಕಂಥವರು. ಅಗಲಿದ ಅವರ ಆತ್ಮಕ್ಕೆ ಶಾಂತಿ ದೊರಕಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ಉಂಟಾದ ನೋವನ್ನು ಪರಿಹರಿಸಲಿ ಎಂದು ಪ್ರಾರ್ಥಿಸುತ್ತೇನೆ.

ಮಾನ್ಯ ಸದಸ್ಯರಿಬ್ಬರು ಇಂದು ನಮ್ಮೆಲ್ಲರನ್ನು ಅಗಲಿ ಹೋಗಿದ್ದಾರೆ. ಗೌರವಾನ್ವಿತ ಸದಸ್ಯರ ಅಗಲುವಿಕೆಯಿಂದಾದ ದುಃಖದಲ್ಲಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವಲ್ಲಿ ಸರಕಾರ, ಸದನ, ಹಾಗೂ ಜನತೆ ಎಲ್ಲರೂ ಸೇರಿ ಪಾಲ್ಗೊಂಡಿದ್ದಾರೆ ಎಂಬುದನ್ನು ಹೇಳುತ್ತಾ ಮಾನ್ಯ ಸದನದ ಅಧ್ಯಕ್ಷರವರು ಹೇಳಿದ ಹಾಗೆ, ಒಂದು ನಿರ್ಣಯವನ್ನು

ಮಾಡಿ ಅವರ ಕುಟುಂಬ ವರ್ಗದವರಿಗೆ ಕಳುಹಿಸುವ ಬಗ್ಗೆ ಧ್ವನಿಗೂಡಿಸಿ, ಅಗಲಿದ ನಾಯಕರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

11.30 ಪಿ.ಎಂ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೇ ಈ ಸದನದ ಅತ್ಯಂತ ಹಿರಿಯ ಗೌರವಾನ್ವಿತ ಸದಸ್ಯರಾಗಿದ್ದ ಶ್ರೀ ಕೆ.ಹೆಚ್. ಪಾಟೀಲರು ಹಾಗೂ ಮತ್ತೊಬ್ಬ ಹಿರಿಯ ಸದಸ್ಯರಾಗಿದ್ದ ಶ್ರೀ ಬಾಬು ಸಾಹೇಬ್ ರಾವ್ ಸಾಹೇಬ್ ಮಹಾಗಾಂವಕರ್ ಅವರುಗಳ ನಿಧನದ ಬಗ್ಗೆ ತಾವು ಈ ಸದನದಲ್ಲಿ ಮಂಡಿಸಿರುವ ಸಂತಾಪಸೂಚಕ ನಿರ್ಣಯವನ್ನು ನಾನು ಬೆಂಬಲಿಸುತ್ತ, ಎರಡು ಮಾತುಗಳನ್ನು ಆಡಲು ಬಯಸುತ್ತೇನೆ. ಸಹಕಾರಿ ಕ್ಷೇತ್ರದ ದಿಗ್ಗಜರಾಗಿದ್ದ ಶ್ರೀ ಕೆ.ಹೆಚ್. ಪಾಟೀಲರು ಇಂದಿನ ಸದನದಲ್ಲಿ ಇಲ್ಲದೇ ಇರುವುದು ಮುಂದಿನ ಸಾಲಿನಲ್ಲಿ ಇಲ್ಲದೇ ಇರುವುದನ್ನು ನೋಡಿದಾಗ ನನಗಂತೂ ತುಂಬ ದುಃಖವಾಗುತ್ತದೆ. ಮಾನ್ಯ ಪಾಟೀಲರು, ವಿರೋಧಪಕ್ಷದಲ್ಲಿದ್ದಾಗ ಈ ಕಡೆ ಕುಳಿತುಕೊಂಡಿದ್ದಾಗ ನಮಗೆಲ್ಲರಿಗೂ ಅವರ ಬಗ್ಗೆ ದೊಡ್ಡ ಗೌರವ ಇತ್ತಷ್ಟೇ ಅಲ್ಲ, ಒಂದು ರೀತಿಯ ಭಯ ಇತ್ತು. ಆಗೆಲ್ಲ ನಾವು ಏನೇ ಮಾತನಾಡಬೇಕಾದರೂ, ಪಾಟೀಲರು ಏನಾದರೂ ಪ್ರಶ್ನೆ ಕೇಳಿದಾಗ ಮತ್ತು ಸಂಬಂಧಪಟ್ಟ ವಿಚಾರಗಳ ಬಗ್ಗೆ ಭಾಷಣ ಮಾಡುವಾಗ, ಒಂದು ರೀತಿಯ ಭಯದಿಂದ ನಾವು ಅವರ ಮಾತು ಕೇಳುತ್ತಿದ್ದೆವು. ಅದಕ್ಕೆ ಕಾರಣ ಅವರಲ್ಲಿದ್ದ ಭಕ್ತಿ ಎಂದು ನಾನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಅವರು ಮಾಡಿದ್ದ ಕೆಲಸವನ್ನು ಜನರು ಬಹಳ ದಿನಗಳ ಕಾಲ ನೆನಸಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ರೈತರ ಬಗ್ಗೆ ಒಳ್ಳೆಯ ಅನುಕಂಪವನ್ನು ಇಟ್ಟುಕೊಂಡಿದ್ದ ಪಾಟೀಲರು 25-30 ವರ್ಷಗಳ ಹಿಂದೆಯೇ ಹುಲಕೋಟಿಯಂತಹ ಒಂದು ಗ್ರಾಮವನ್ನು ಇಂದಿನ ಆದರ್ಶ ಗ್ರಾಮವನ್ನಾಗಿ ಮಾಡಿದ್ದಾರೆ. ನಾವೆಲ್ಲ ಸಮಾಜಕ್ಕೋಸ್ಕರ ದುಡಿಯುತ್ತಿರುವ ಮುಖಂಡರು ಅವರ ತರಹ ಒಂದೊಂದು ಹಳ್ಳಿಯನ್ನು ಅಳವಡಿಸಿಕೊಂಡು ಕೆಲಸ ಮಾಡಿದರೆ ಬಹುಶಃ ಈ ಸಮಾಜದ ಉನ್ನತಿ ಬಹಳ ಬೇಗ ಆಗುತ್ತದೆಂದು ನಾನು ತಿಳಿದಿದ್ದೇನೆ. ಅವರು ಹುಲಕೋಟಿಯಲ್ಲಿ ಮಾಡಿರುವ ಕೆಲಸ ಅಪಾರವಾದುದು. ಯಾವುದಾದರೂ ಕೆಲಸಕ್ಕೆ ಅವರ ಬಳಿ ಹೋದಾಗ ವಯಸ್ಸಿನ ಅಂತರ ಮರೆತು ಗೌರವ ಪ್ರೀತಿ ವಿಶ್ವಾಸಗಳಿಂದ ನಮ್ಮನ್ನು ಅವರು ಮಾತಾಡಿಸುತ್ತಿದ್ದರು. ರಾಜಕೀಯವಾಗಿ ನಮ್ಮಗಳ ಮಧ್ಯೆ ಭಿನ್ನಾಭಿಪ್ರಾಯ ಇದ್ದರೂ ಕೂಡ ನಮ್ಮ ಮಾತಿಗೆ ಆದ್ಯತೆ. ಕೊಡುತ್ತಿದ್ದರು. ಈ ನಾಡಿನ ಗ್ರಾಮೀಣ ಜನರ ಬದುಕಿನ ಬಗ್ಗೆ ತಮ್ಮ ಉಸಿರು ಇರುವವರೆಗೂ ದುಡಿದಂಥ ಪುಣ್ಯಾತ್ಮ ಅವರು. ಗದಗ ತಾಲೂಕಿನ ಹುಲಕೋಟಿ ಗ್ರಾಮ ಕೈಗಾರಿಕೆಗಳ ಬಗ್ಗೆ ಅವರು ಕೊಟ್ಟ ಮಹತ್ವ ಬಹಳ ದೊಡ್ಡದೆಂದು ನಾನು ತಿಳಿದಿದ್ದೇನೆ. ಗಾಂಧೀಜಿಯವರ ತತ್ವಗಳನ್ನು ಅಳವಡಿಸಿಕೊಂಡು ಅವರಂತೆ ಗ್ರಾಮೀಣಾಭಿವೃದ್ಧಿಗಾಗಿ ದುಡಿದ ಮತ್ತೊಬ್ಬ ನಮ್ಮ ರಾಜ್ಯದ ಗೌರವಾನ್ವಿತ ನಾಯಕ ನಜೀರ್ ಸಾಬರ ಜ್ಞಾಪಕ ನನಗೆ ಈ ಸಂದರ್ಭದಲ್ಲಿ ಬರುತ್ತಾ ಇದೆ. ರಾಜಕೀಯವಾಗಿ ಭಿನ್ನಾಭಿಪ್ರಾಯಗಳಿರಬಹುದು. ಆದರೂ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಮಸೂದೆಯನ್ನು ನಜೀರ್‌ಸಾಬರು ಮಂಡಿಸುವ ಸಂದರ್ಭದಲ್ಲಿ ಅವರಿಗೆ ಅದರಲ್ಲಿ ನೂರಕ್ಕೆ ನೂರರಷ್ಟು ನಂಬಿಕೆ ಇತ್ತು, ವಿಶ್ವಾಸ ಇತ್ತು. ನಜೀರ್ ಸಾಬರು ಆ ಕೆಲಸ ಮಾಡಿದಾಗ ಪಾಟೀಲರು ಎಲ್ಲ ಭಿನ್ನಾಭಿಪ್ರಾಯ ಮರೆತು ನಜೀರಸಾಬರ ಬೆನ್ನುತಟ್ಟಿ ನೀನು ನನ್ನ ಮೆಚ್ಚಿನ ಶಿಷ್ಯ ಎಂಬ ಹೆಮ್ಮೆ ನನಗೆ ಎಂದು ಹೇಳಿದ ಪಾಟೀಲರು ಈ ನಾಡಿನ ರೈತರ ಬಂಧುವಾಗಿದ್ದವರು.

ತಾವು ಇಟ್ಟುಕೊಂಡಿದ್ದ ಅಭಿಪ್ರಾಯಗಳ ವಿರುದ್ಧ ಯಾರೇ ಆದರೂ ಅಡ್ಡ ಬಂದರೂ ಅದಕ್ಕಾಗಿ ಹೋರಾಟ ಮಾಡುವ ಪ್ರವೃತ್ತಿ ಅವರಲ್ಲಿ ಬೆಳೆದಿತ್ತು. ಈಚಿನ ದಿನಗಳಲ್ಲಿ ಅವರ ಆರೋಗ್ಯ ಕುಸಿಯುತ್ತಿತ್ತು. ಈ ಸದನಕ್ಕೆ ಅವರು ಕಳೆದ ಸಲ ಬಂದಾಗ ಅವರ ಕಣ್ಣಿನ ದೃಷ್ಟಿ ಸ್ಪಷ್ಟವಾಗಿರಲಿಲ್ಲ. ಅವರ ದೇಹವೂ ಸಣಕಲಾಗುತ್ತಿತ್ತು. ಆದರೂ ಸಹ ಕಾವೇರಿ ಬಗ್ಗೆ ಆಗಲಿ ಅಥವಾ ಇನ್ನಾವುದೇ ವಿಚಾರದ ಬಗ್ಗೆಯಾಗಲಿ ಸದನಕ್ಕೆ ಅವರು ಬಂದು ತಾವು ವಹಿಸಿಕೊಂಡಿದ್ದ ಜವಾಬ್ದಾರಿಯನ್ನು ಬಹಳ ಚೆನ್ನಾಗಿ ನಿರ್ವಹಿಸುತ್ತಿದ್ದರು. ಅವರು ಆಡಳಿತದ ಚುರುಕುತನದ ದೃಷ್ಟಿಯಿಂದ ಯುವಕರೇ ಆಗಿದ್ದರು. ನಾವೆಲ್ಲ ಯುವಕರು, ಯಾರಾದರೂ ಬಂದು ಏನಾದರೂ ಕೆಲಸ ಕೇಳಿದರೆ ಅದನ್ನು ಮಾಡಿಕೊಡಲು 8-10 ದಿನಗಳೇ ತೆಗೆದುಕೊಳ್ಳುತ್ತೇವೆ. ಆದರೆ ಅವರು ತಕ್ಷಣ ಕೆಲಸ ಮಾಡಿಸಿಕೊಡುತ್ತಿದ್ದರು. ಅವರ ಆಡಳಿತದ ಚುರುಕುತನ ನೋಡಿದಾಗ ನಾವೆಲ್ಲ ತಲೆತಗ್ಗಿಸಬೇಕಾಗಿತ್ತು.

ಅಂಥ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಧಾರವಾಡ ಜಿಲ್ಲೆಯ ಲಕ್ಷಾಂತರ ಜನರು, ಅವರ ಅಭಿಮಾನಿಗಳು ಅವರ ಸಾವಿನ ಸುದ್ದಿಯನ್ನು ಕೇಳಿ ಕಣ್ಣೀರನ್ನು ಸುರಿಸಿದ್ದಾರೆ. ಮಾನ್ಯ ಪಾಟೀಲರು ಈ ರಾಜ್ಯದ ಜನತೆಗೋಸ್ಕರ ರಾಜ್ಯಕ್ಕೋಸ್ಕರ ರೈತಾಪಿ ಜನರಿಗಾಗಿ ಮಾಡಿದಂಥ ಅಪಾರವಾದ ತ್ಯಾಗ ಮಹತ್ತರವಾದುದು. ಅಂತಹ ಒಂದು ಛಲದ ವ್ಯಕ್ತಿತ್ವ ಅವರಲ್ಲಿ ಕಂಡುಬರುತ್ತಿತ್ತು. ಅಪ್ಪಟ ರೈತನ ಮಗನಾದ ಕೆ.ಹೆಚ್. ಪಾಟೀಲರನ್ನು ಕಳೆದುಕೊಂಡು ಇವತ್ತು ಈ ಸದನ ಬಡವಾಗಿದೆ. ಕರ್ನಾಟಕ ರಾಜ್ಯ ಒಬ್ಬ ಧೀಮಂತ ಮುಖಂಡನನ್ನು ಕಳೆದುಕೊಂಡಿದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ನಾನು ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ದಯಪಾಲಿಸಲಿ ಎಂದು ಭಗವಂತನಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಕೆ.ಹೆಚ್. ಪಾಟೀಲರ ಜ್ಞಾಪಕಾರ್ಥವಾಗಿ ಗದಗ್‌ನ್ನು ಆದಷ್ಟು ಬೇಗ ಒಂದು ಜಿಲ್ಲೆಯನ್ನಾಗಿ ಮಾಡಬೇಕು. ಆ ಆಸೆಯನ್ನು ಪಾಟೀಲರು ಇಟ್ಟುಕೊಂಡಿದ್ದರು. ಆ ಆಸೆಯನ್ನು ಈಡೇರಿಸುವುದಕ್ಕೆ ತಾವು ಬೇಗ ಒಂದು ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಮತ್ತು ಸಹಕಾರಿ ಕ್ಷೇತ್ರದಲ್ಲಿ ಅವರು ಮಾಡಿರತಕ್ಕಂಥ ಅಮೋಘಸೇವೆಗಾಗಿ ನಮ್ಮ ರಾಜ್ಯದಲ್ಲಿ ಎಸ್.ಎಲ್.ಡಿ.ಕೋ-ಅಪರೇಟಿವ್ ಬ್ಯಾಂಕ್‌ಗಳು ಏನು ಇವೆ ಅವುಗಳಿಗೆ ಮಾನ್ಯ ಕೆ.ಹೆಚ್.ಪಾಟೀಲರ ಹೆಸರನ್ನು ಇಡುವುದಕ್ಕೆ ಈ ಸದನದ ಎಲ್ಲಾ ಸದಸ್ಯರು ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಇವೆರಡೂ ಸಲಹೆಗಳನ್ನು ತಮ್ಮ ಮುಂದಿಟ್ಟು ಕಳೆದ ಮೂವತ್ತು ವರ್ಷಗಳಿಂದಲೂ ಬೆಂಗಳೂರಿನ ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿರುವ ಅವರ ಕಛೇರಿಯಲ್ಲಿ ಅವರ ಎಲ್ಲ ಚಟುವಟಿಕೆಗಳನ್ನು ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ, ಮಂತ್ರಿಗಳಾಗಿದ್ದಾಗ, ಶಾಸಕರಾಗಿದ್ದಾಗ ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಆ ರಸ್ತೆಗೂ ಕೂಡ ಪಾಟೀಲರ ಹೆಸರನ್ನು ಇಡುವುದಕ್ಕೆ ನಗರಪಾಲಿಕೆಗೆ ತಿಳಿಸಿ ಅದನ್ನೂ ಸಹಾ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ರೀತಿಯ ಸಲಹೆಗಳನ್ನು ನಾನು ಸದನದ ಮೂಲಕ ಕೊಡುವುದಕ್ಕೆ ಬಯಸುತ್ತೇನೆ.

ಮತ್ತೊಬ್ಬ ಹಿರಿಯ ಸದಸ್ಯರಾಗಿರತಕ್ಕಂಥ ಪಾಟೀಲರ ಸಮಕಾಲೀನರಾಗಿದ್ದಂಥ ಬಾಬು ಸಾಹೇಬ್, ರಾವ್ ಸಾಹೇಬ್ ಮಹಾಗಾಂವ್‌ಕರ್ ಅವರು ನಮ್ಮನ್ನು ಅಗಲಿದ್ದಾರೆ. ಅವರಿಗೂ ನಮಗೂ ರಾಜಕೀಯವಾಗಿ ಬಹಳ ಭಿನ್ನಾಭಿಪ್ರಾಯಗಳಿದ್ದವು. ಅವರು ಈ

ಸದನದ ಸದಸ್ಯರಾದ ಮೇಲೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ವಿಚಾರಗಳನ್ನು ನೀವು ಬಿಡಬೇಕು, ಬೆಳಗಾಂನ್ನು ಕರ್ನಾಟಕಕ್ಕೆ ಬಿಡಬೇಕು, ಅದು ಮಹಾರಾಷ್ಟ್ರಕ್ಕೆ ಹೋಗಲಿಕ್ಕೆ ಸಾಧ್ಯ ಇಲ್ಲ, ಬೆಳಗಾಂ ಕರ್ನಾಟಕದಲ್ಲಿಯೇ ಇರತಕ್ಕಂಥದ್ದು, ಈ ವಿಚಾರವನ್ನು ರಾಜಕೀಯಕ್ಕೋಸ್ಕರ ಮಾಡಬಾರದು ಎಂದು ಹೇಳಿ ಅನೇಕ ಸಾರಿ ನಾನು ತೀಕ್ಷ್ಣವಾಗಿ ವಾದವನ್ನು ಮಾಡುತ್ತಿದ್ದೆ. ಆ ರೀತಿ ವಾದವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅತ್ಯಂತ ಸ್ನೇಹಮಯಿಯಾಗಿ ಬಹಳ ಪ್ರೀತಿ ವಿಶ್ವಾಸದಿಂದ ಅವರು "ಇಲ್ಲ, ಇದು ಸಾಧ್ಯ ಇಲ್ಲ" ನಮ್ಮ ವಿಚಾರಗಳು ಈ ರೀತಿ ಇದೆ ಎಂದು ತಮ್ಮದೇ ಆದ ಒಂದು ವಿಚಾರವನ್ನು ಇಟ್ಟುಕೊಂಡು ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷರಾಗಿ ಆ ಭಾಗದ ಪ್ರಗತಿಗೋಸ್ಕರ ಕೆಲಸವನ್ನು ಮಾಡಿದರು. ಅವರು ಮಹಾರಾಷ್ಟ್ರದ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ದುಡಿದಿರತಕ್ಕಂಥವರು, ಮಾನ್ಯ ಮಹಾಗಾಂವ್‌ಕರ್‌ರವರು ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಅವರ ವಿಚಾರದ ಬಗ್ಗೆ ನಮಗೂ ಭಿನ್ನಾಭಿಪ್ರಾಯಗಳು ಇವತ್ತಿಗೂ ಸಹ ಇವೆ. ಮುಂದೆಯೂ ಸಹಾ ಎಂ.ಇ.ಎಸ್. ಬಗ್ಗೆ ಇರುತ್ತದೆ. ಇವರು ರಾಜ್ಯದ ಜನತೆಗೆ ಆ ಭಾಗದಲ್ಲಿ ಮಾಡಿರತಕ್ಕಂಥ ಸೇವೆಯನ್ನು ಈ ಸಂದರ್ಭದಲ್ಲಿ ನೆನೆಸಿಕೊಂಡು ಈ ಇಬ್ಬರೂ ಪುಣ್ಯಾತ್ಮರುಗಳಿಗೂ ಪಕ್ಷದ ಪರವಾಗಿ, ನನ್ನ ಸಹೋದ್ಯೋಗಿಗಳ ಪರವಾಗಿ, ನಮ್ಮ ವಿರೋಧ ಪಕ್ಷದ ಸಭಾನಾಯಕರಾದ ಮಾನ್ಯ ಚಂದ್ರೇಗೌಡರಿಗೆ ಇವತ್ತು ಅನಿವಾರ್ಯವಾಗಿ ಈ ಸಭೆಗೆ ಬರಲಿಕ್ಕೆ ಆಗುತ್ತಿಲ್ಲ, ಅವರ ಪರವಾಗಿಯೂ ಸಹ ನಾನು ತಮ್ಮ ಜೊತೆಯಲ್ಲಿ ದನಿಗೂಡಿಸುತ್ತೇನೆ. ತಾವು ಏನು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದ್ದೀರಿ, ಅದಕ್ಕೆ ನಾನೂ ಸಹ ಧ್ವನಿಗೂಡಿಸಿ, ಅವರುಗಳ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ನಾನು ನನ್ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೇ, ಸಚಿವರಾಗಿರತಕ್ಕಂಥ ಕೆ.ಹೆಚ್. ಪಾಟೀಲರು ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಮಾನ್ಯ ಶಾಸಕರಾಗಿರತಕ್ಕಂಥ ಬಾಬುಸಾಹೇಬ್ ರಾವ್ ಸಾಹೇಬ್ ಮಹಗಾಂವ್‌ಕರ್‌ವರು ಇವತ್ತು ನಮ್ಮ ಮಧ್ಯೆ ಇಲ್ಲ. ತಾವು ತಮ್ಮ ಸಂತಾಪ ಸೂಚನಾ ನಿರ್ಣಯವನ್ನು ಸದನದ ಮುಂದೆ ಇಡುವಂಥ ಸಂದರ್ಭದಲ್ಲಿ ಹಿರಿಯರಾದ ಕೆ.ಹೆಚ್. ಪಾಟೀಲರ ಬಗ್ಗೆ ಏನು ಹೇಳಿದ್ದೀರಿ, ನಿಜಕ್ಕೂ ಸಹ ಆ ಎಲ್ಲಾ ಗೌರವವೂ ಅವರಿಗೆ ಸಲ್ಲಬೇಕಾಗಿರತಕ್ಕಂಥದ್ದು. ಅವರು ಹಿರಿಯ ಸಚಿವರಾಗಿ ಕೆಲಸವನ್ನು ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಕೆಲವು ಪ್ರಮುಖ, ಜಟಿಲ ಸಮಸ್ಯೆಗಳು ಬಂದಾಗ ಅವರು ಎದ್ದು ನಿಂತು ಮಾತನಾಡಿದರೆ ನಾವೆಲ್ಲಾ ಅವರ ಮಾತಿಗೆ ತಲೆಬಾಗಿ ಕುಳಿತುಕೊಳ್ಳತಕ್ಕಂಥದ್ದನ್ನು ನಾವೆಲ್ಲರೂ ವೀಕ್ಷಣೆ ಮಾಡಿದ್ದೇವೆ. ಕರ್ನಾಟಕ ರಾಜ್ಯಕ್ಕೆ ಅವರ ಸೇವೆ ತುಂಬಾ ಅಮೋಘವಾದಂಥದ್ದು. ಬಹುಶಃ ಈ ನಾಡಿನ ಜನ ಎಂದಿಗೂ ಸಹ ಅದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಸಹಕಾರಿ ಸಚಿವರಾಗಿ ಅವರು ಮಾಡಿದಂಥ ಸೇವೆ, ಸಹಕಾರಿ ಕ್ಷೇತ್ರದಲ್ಲಿ ಇಡೀ ನಾಡಿಗೆ ಅವರು ಮಾಡಿದಂಥ ಸೇವೆ, ಅದೇ ರೀತಿ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದಂಥ ಕೆಲಸ, ನಿಜಕ್ಕೂ ಸಹಾ ತುಂಬಾ ಮಹತ್ವವಾದಂಥದ್ದು. ಆದರೆ ಒಂದೇ ಒಂದು ದುಃಖದ ಸಂಗತಿ, ಸತ್ಯ ಸಂಗತಿ ಏನೆಂದರೆ, ಇಂದಿನ ರಾಜಕೀಯ ಪರಿಸ್ಥಿತಿ ಅವರಿಗೆ ಬೇಸರ ತಂದಿತ್ತು. ಅದನ್ನು ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನವನ್ನು ಅವರು ಮಾಡಿದರು. ಅವರು ಸಚಿವರಾದರೂ ಸಹ ಇದ್ದದ್ದನ್ನು ಇದ್ದ ಹಾಗೆ ಹೇಳುವುದಕ್ಕೆ ಕಂಡ ತಪ್ಪುಗಳನ್ನು ನೇರವಾಗಿ ಹೇಳುವುದಕ್ಕೆ ಎಂದೂ ಹಿಂದೆ ಮುಂದೆ ನೋಡಲಿಲ್ಲ.

ಅವರು ಕೊನೆಯ ದಿವಸಗಳಲ್ಲಂತೂ ಇಂದಿನ ಪರಿಸ್ಥಿತಿಯನ್ನು ನೋಡಿ ಬಹಳ ನೊಂದು ಬೆಂದು ಈ ರೀತಿ ನಮ್ಮನ್ನು ಅಗಲುವಂತಹ ಸಂದರ್ಭ ಅವರಿಗೆ ಒದಗಿ

ಬಂತು. ಅವರು ಯಾವ ದೃಷ್ಟಿಯನ್ನು ಇಟ್ಟುಕೊಂಡು ಈ ನಾಡಿನ ಅಭಿವೃದ್ಧಿಗೋಸ್ಕರ ಕೆಲಸ ಮಾಡಿದರೋ ಆ ದಿಕ್ಕಿನಲ್ಲಿ ಹೋಗುವಂತಹ ಪ್ರಯತ್ನವನ್ನು ಮಾಡಿದರೆ ನಾವು ನೀವು ನಿಜವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ. ಮಾನ್ಯ ದಿವಂಗತ ಬಾಬು ಸಾಹೇಬ್, ರಾವ್ ಸಾಹೇಬ್ ಮಹಾಗಾಂಕರ್‌ರವರು ಇಲ್ಲಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವರು ಹಿರಿಯರಾಗಿದ್ದಂತವರು, ಅವರು ಮಹಾ ರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷರಾಗಿ ಸೇವೆಯನ್ನು ಮಾಡಿದಂತಹವರು. ಅವರು ಇವತ್ತು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಇವರಿಬ್ಬರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬವರ್ಗದವರಿಗೆ ಇದನ್ನು ಸಹಿಸುವಂತಹ ಶಕ್ತಿಯನ್ನು ಭಗವಂತನು ನೀಡಲಿ ಎಂದು ನನ್ನ ಪರವಾಗಿ ಹಾಗೂ ನನ್ನ ಪಕ್ಷದ ಪರವಾಗಿ ತಿಳಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ರಾಜಕೀಯದಲ್ಲಿ ದಿಗ್ಗಜರಾಗಿದ್ದಂತಹ ಶ್ರೀ ಕೆ.ಹೆಚ್. ಪಾಟೀಲರು ಇವತ್ತು ನಮ್ಮ ಕಣ್ಣು ಮುಂದೆ ಇಲ್ಲ. ಮಾನ್ಯ ದಿವಂಗತ ಕೆ.ಹೆಚ್. ಪಾಟೀಲ್‌ರವರು ಅಥವಾ ಯಾರೇ ಆಗಲಿ ಅವರು ಯಾವ ಸ್ಥಾನವನ್ನು ಅಲಂಕರಿಸುತ್ತಾರೆ ಅಥವಾ ಯಾವ ಸ್ಥಾನದಲ್ಲಿ ಇರುತ್ತಾರೆ ಎನ್ನುವುದಕ್ಕಿಂತ ಹೆಚ್ಚಿಗೆ ಅವರು ಆ ಸ್ಥಾನದಲ್ಲಿ ಇದ್ದಾಗ, ಆ ಸ್ಥಾನಕ್ಕೆ ತಂದು ಕೊಟ್ಟ ಗೌರವದಿಂದ ನಾವು ಅವರನ್ನು ಗುರ್ತಿಸುತ್ತೇವೆ. ಅವರು ವಿರೋಧ ಪಕ್ಷದಲ್ಲಿ ಇದ್ದಂತಹ ಕಾಲದಲ್ಲಿ ಅವರಿಗೆ ಸರಿಯೆಂದು ಕಂಡುಬಂದರೆ ಅದನ್ನು ಅವರು ನೇರವಾಗಿ ಹೇಳುತ್ತಿದ್ದರು. ಬಹುಶಃ ಒಂದು-ಎರಡು ಸಾರಿ ಆ ಶಿಸ್ತನ್ನು ಉಲ್ಲಂಘನೆ ಮಾಡಿದರೂ ಕೂಡ ಅವರು ಆಡಳಿತಪಕ್ಷ ತಂದಿದ್ದಕ್ಕೆ ಬೆಂಬಲವನ್ನು ಸೂಚಿಸಿದ್ದು ಕೂಡ ಉಂಟು. ಆಗ ಅಂದಿನ ವಿರೋಧ ಪಕ್ಷದಲ್ಲಿ ಸ್ವಲ್ಪಮಟ್ಟಿಗೆ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದಿದ್ದು ಸಹ ಉಂಟು. ಇದಕ್ಕೆಲ್ಲಾ ಕಾರಣ ಅಂದರೆ, ನಾನು ಮೊದಲೇ ತಿಳಿಸಿದಹಾಗೆ, ಅವರು ಯಾವ ಸ್ಥಾನವನ್ನು ಅಲಂಕರಿಸಿರುತ್ತಾರೋ ಆ ಸ್ಥಾನಕ್ಕಿಂತ ಹೆಚ್ಚಿನ ಉನ್ನತಿ, ಮೇಲ್ಮೆಯನ್ನು ಸಾಧಿಸಿರತಕ್ಕವರು ದಿವಂಗತ ಕೆ.ಹೆಚ್. ಪಾಟೀಲ್‌ರವರು. ಅವರು ಕರ್ನಾಟಕಕ್ಕೆ ಛಲದಲ್ಲಿ ಬಹಳ ಅದ್ವಿತೀಯರು. ಅದಕ್ಕೆ ಉದಾಹರಣೆ ಎಂದರೆ, ಅವರು ಏನಾದರೂ ಮನಸ್ಸಿನಲ್ಲಿ ಮಾಡಬೇಕು ಎಂದುಕೊಂಡರೆ ಅದನ್ನು ಮಾಡಿಯೇ ಮಾಡತಕ್ಕವರು. ಶಾಸಕರಾದ ಮೇಲೆ ವಿದ್ಯಾರ್ಥಿಯಾಗಿ ಎಂ.ಎ ಪದವಿಯನ್ನು ಪಡೆದಿರತಕ್ಕವರು. ಅವರು ಈ ಶಾಸನಸಭೆಯ ಸದಸ್ಯರಾಗಿದ್ದರೂ ಓದಿ ಪದವಿಯನ್ನು ಪಡೆಯಬೇಕು ಎನ್ನತಕ್ಕ ಛಲದಿಂದ ಆ ಸಾಧನೆಯನ್ನು ಮಾಡಿರತಕ್ಕವರು. ನನಗೆ ಗೊತ್ತಿರುವಹಾಗೆ ಆ ರೀತಿ ಯಾರೂ ಇಲ್ಲ ಎಂದು ನನ್ನ ಭಾವನೆ. ರೈತರಾಗಿ ರೈತರ ಸಮಸ್ಯೆ ಬಂದಾಗ ಅವರು ಎಲ್ಲಾ ತ್ಯಾಗಕ್ಕೂ ಸಿದ್ಧರಾಗಿದ್ದರು. ರೈತರ ಸಮಸ್ಯೆಯನ್ನು ಅರಿತುಕೊಳ್ಳುವುದರಲ್ಲಿ ಅವರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಎಲ್ಲಾ ತ್ಯಾಗಕ್ಕೂ ಸಿದ್ಧರಾಗಿರತಕ್ಕವರು. ಕಾರಣ, ಅವರು ಸ್ವತಃ ರೈತರಾಗಿರತಕ್ಕವರು, ರೈತರ ಸಮಸ್ಯೆಯನ್ನು ಅರಿತುಕೊಂಡಿರತಕ್ಕವರು. ನಾನು 1972ರಲ್ಲಿ ಈ ಸಭೆಗೆ ಬಂದಾಗ ಅವರು ವ್ಯವಸಾಯ ಸಚಿವರಾಗಿದ್ದರು. ವ್ಯವಸಾಯಗಾರರಿಗೆ ಸಂಬಂಧಪಟ್ಟ ಹಾಗೆ ನಾವು ಯಾವುದೇ ಕೆಲಸಕ್ಕೆ ಹೋದಾಗ ಅವರು ಬಹಳ ಆತ್ಮೀಯದಿಂದ, ಅಭಿಮಾನದಿಂದ ಮಾತನಾಡುತ್ತಿದ್ದರು. ಅವರು ಕಾನೂನಿನ ಇತಿಮಿತಿಯಲ್ಲಿ ಆ ಕೆಲಸವನ್ನು ಮಾಡುತ್ತಿದ್ದರು. ಅವರು ಈಚೆಗೆ ಸಹಕಾರ ಸಚಿವರಾಗಿದ್ದರು. ಸಹಕಾರ ಕಾನೂನಿಗೆ ತಿದ್ದುಪಡಿ ತರತಕ್ಕದ್ದರ ಬಗ್ಗೆ ವಿರೋಧ ಪಕ್ಷದ ನಾಯಕರುಗಳಲ್ಲಿ ಸಮಾಲೋಚನೆ ಮಾಡಿದ್ದರು. ನಮ್ಮಲ್ಲೂ ಸಹ ಸಹಕಾರ ಕ್ಷೇತ್ರದಲ್ಲಿ ಅನುಭವ ಇದ್ದಂತಹವರಾದ ಮಾನ್ಯ ಜಾಲಪ್ಪನವರು, ಮಾನ್ಯ ನಾಣಯ್ಯನವರು ಹೋಗಿ ಹೇಳ್ದಿದಾಗ

ಅವರು ನೇರವಾಗಿ ತಕ್ಷಣ ಹೌದು ಇದು ಸೂಕ್ತ ಇದೆ, ಇದನ್ನು ಮಾಡಲೇ ಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟರು. ಈ ರೀತಿ ತಿದ್ದುಪಡಿ ತರಬೇಕು ಅಥವಾ ಡ್ರಾಫ್ಟ್ ಮಾಡುವಾಗ ಈ ರೀತಿ ಮಾಡಬೇಕು ಎಂದು ತತ್‌ಕ್ಷಣ ಅಲ್ಲಿಯೇ ನಮ್ಮ ಕಣ್ಣು ಎದುರಿಗೆ ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಸೂಚನೆಯನ್ನು ಕೊಟ್ಟಿರತಕ್ಕದ್ದನ್ನು ನಾವು ಪ್ರತ್ಯಕ್ಷ ದರ್ಶಿಗಳಾಗಿ ನೋಡಿದ್ದೇವೆ. ಏಕೆಂದರೆ ಅದು ಸರಿಯೆಂದು ಕಂಡುಬಂದರೆ, ಅದನ್ನು ವಿರೋಧಪಕ್ಷದವರು ಹೇಳುತ್ತಾರೋ, ಅಥವಾ ಆಡಳಿತ ಪಕ್ಷದವರು ಹೇಳುತ್ತಾರೋ ಎಂದು ಅದಕ್ಕೆ ಬೆಲೆ ಕೊಡುತ್ತಿರಲಿಲ್ಲ, ವಸ್ತುನಿಷ್ಠೆಗೆ ಅವರು ಬೆಲೆ ಕೊಡುತ್ತಿದ್ದರು ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಅಷ್ಟೆ ಅಲ್ಲದೆ, ಇವತ್ತಿನ ದಿವಸ ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಎಲ್ಲಾ ಏರುಪೇರುಗಳಿಗೆ ಅವರು ಭಾಗಿಯಾಗಿರತಕ್ಕವರು. ಹಿಂದೆ ಒಂದು ಸಾರಿ ಆಡಳಿತ ಪಕ್ಷದ ಮುಖಂಡರಾಗಿ ಕೆಲಸ ಮಾಡಿದ್ದಾರೆ.

ಆದರೆ, ಅವರಿಲ್ಲದೆ ಈ ರಾಜಕೀಯದಲ್ಲಿ, ಈ ರಾಜ್ಯದಲ್ಲಿ ಆಡಳಿತ ಪಕ್ಷವಾಗಲೀ ಅಥವಾ ಕಾಂಗ್ರೆಸ್ ಪಕ್ಷವಾಗಲಿ ಕೆಲಸ ಮಾಡುವುದಕ್ಕಾಗುವುದಿಲ್ಲ ಎನ್ನುವಂಥ ಮಟ್ಟಕ್ಕೆ ಅವರು ರಾಜಕೀಯ ಬೆಳೆಸಿ, ಕೊನೆಗೆ ಕಾಂಗ್ರೆಸ್ ಪಕ್ಷವನ್ನೇ ಪುನ: ಸೇರಿ, ಈ ರಾಜ್ಯದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದರು. ಇವೊತ್ತಿನ ದಿವಸ ಅವರು ನಮ್ಮ ಕಣ್ಮುಂದೆ ಇಲ್ಲ. ನಾನು ಒಬ್ಬ ರೈತನಾಗಿ, ಒಬ್ಬ ರೈತರ ಧೀಮಂತ ನಾಯಕನನ್ನು ಕಳೆದುಕೊಂಡಿರತಕ್ಕಂಥ ದುಃಖದಲ್ಲಿ ಇಡೀ ರಾಜ್ಯದ ರೈತ ವರ್ಗದ ಜೊತೆಯಲ್ಲಿ ನಾನು ಸಹ ಭಾಗಿಯಾಗಿದ್ದೇನೆ. ಅದೇ ರೀತಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾಗಿದ್ದಂಥ ಶ್ರೀ ಬಾಬು ಸಾಹೇಬ ರಾವ್ ಸಾಹೇಬ್‌ರವರು ಸಹ ಇವೊತ್ತು ನಮ್ಮ ಕಣ್ಮುಂದೆ ಇಲ್ಲ ಅವರ ವಿಚಾರವಾಗಿ ನನಗೆ ಹೆಚ್ಚಿಗೆ ಗೊತ್ತಿಲ್ಲದಿರುವ ಕಾರಣದಿಂದಾಗಿ ಅವರ ಆತ್ಮಕ್ಕೆ ಶಾಂತಿ ದೊರೆಯಲೆಂದು ಆಶಿಸುತ್ತಾ, ಮಾನ್ಯ ಅಧ್ಯಕ್ಷರ ನಿರ್ಣಯದಲ್ಲಿ ಮೂರು ತಪ್ಪುಗಳಾಗಿವೆ. ನಿರ್ಣಯದಲ್ಲಿ 'ಮರಾಠ ಮಂಡಳಿ' ಎಂದು ಹೇಳಿದ್ದೀರಿ. ಬಹುಶಃ ಅದು ಮಾರಾಟ ಮಂಡಳಿ ಎಂದು ಇರಬೇಕೆಂದು ಅನ್ನಿಸುತ್ತದೆ. ಅದನ್ನು ಸರಿಪಡಿಸಿಕೊಳ್ಳಬೇಕೆಂದು ತಿಳಿಸುತ್ತಾ, ಈ ಸಂದರ್ಭದಲ್ಲಿ ನಾನು ಅಗಲಿದ ಇಬ್ಬರು ನಾಯಕರ ಆತ್ಮಕ್ಕೆ ನನ್ನ ಪಕ್ಷದ ಪರವಾಗಿ ಹಾಗೂ ವೈಯಕ್ತಿಕವಾಗಿ ಶಾಂತಿ ಸಿಗಲೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಈ ದಿನ ಸನ್ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂಥ ಶ್ರೀ ಕೆ.ಎಚ್. ಪಾಟೀಲ್ ಮತ್ತು ಶ್ರೀ ಬಾಬು ಸಾಹೇಬ್ ರಾವ್ ಸಾಹೇಬ್ ಮಹಾಗಾಂವಕರ್‌ರವರ ನಿಧನದ ಬಗ್ಗೆ ಸಂತಾಪ ಸೂಚನಾ ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಶ್ರೀಮಾನ್ ಕೆ.ಎಚ್. ಪಾಟೀಲ್‌ರವರ ಪೀಠ ಈಗ ಖಾಲಿ ಇದೆ. ಅವರು ಈ ಸಭೆಯಲ್ಲಿದ್ದಾಗ ಒಂದು 'ಯಜಮಾನಿಕೆ' ಇತ್ತು. ಅವರು ಈ ಸಭೆಗೆ ಬಂದು ಕುಳಿತು, ಏನು ಮಾತನ್ನು ಹೇಳುತ್ತಿದ್ದರೋ ಆ ಮಾತಿಗೆ ಮಹತ್ತರವಾದಂಥ ಬೆಲೆ ಇರುತ್ತಿತ್ತು. ಅನೇಕ ಸಾರಿ ಅವರು ಹೇಳಿದ ಮಾತನ್ನು ವಿರೋಧಪಕ್ಷದವರು ಕೇಳಿ ಕುಳಿತದ್ದೂ ಉಂಟು. ಹಿಂದೆ ಒಂದು ಸಾರಿ ನಾವು ಧರಣಿ ಕುಳಿತಾಗ, ಅವರು ತಕ್ಷಣ ಬಂದು ಮಾತನಾಡಿದಾಗ, ನಾವು ಅವರ ಮಾತನ್ನು ಕೇಳಿ ತಕ್ಷಣ ಧರಣಿ ಮಾಡುವುದನ್ನು ಕೈಬಿಟ್ಟು ಹೊರಗೆ ಬಂದಿದ್ದೂ ಉಂಟು. ಶ್ರೀಮಾನ್ ಕೆ.ಎಚ್. ಪಾಟೀಲ್‌ರವರು ಈ ಶಾಸನ ಸಭೆಯ ಒಂದು ದೊಡ್ಡ ಆಸ್ತಿಯಾಗಿದ್ದರು. ಕರ್ನಾಟಕ ಏಕೀಕರಣಕ್ಕೆ ಅಪಾರವಾದಂಥ ಸೇವೆ ಸಲ್ಲಿಸಿರತಕ್ಕಂಥವರು. ಕರ್ನಾಟಕ ನಾಮಕರಣವಾಗಬೇಕಾದರೆ ಶ್ರೀಮಾನ್ ಕೆ.ಎಚ್. ಪಾಟೀಲ್‌ರವರ ಶ್ರಮ ಅತೀ ಮುಖ್ಯ. ಶ್ರೀಮಾನ್ ಡಿ. ದೇವರಾಜ್ ಅರಸ್‌ರವರು

ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ಅವರ ಸಚಿವ ಸಂಪುಟದಲ್ಲಿ ಶ್ರೀ ಕೆ.ಎಚ್. ಪಾಟೀಲ್‌ರವರು ಮಂತ್ರಿಗಳಾಗಿದ್ದರು. ಅವರು ಮಂತ್ರಿಗಳಾಗಿ ಬಂದ ತಕ್ಷಣ, ಮೊದಲನೆಯ ದಿನ ಈ ಸಭೆಯಲ್ಲಿ ಕರ್ನಾಟಕ ಏಕೀಕರಣದ ನಾಮಕರಣ ಮಾಡಿದಂಥ ಒಂದು ದಿಟ್ಟ ನಿಲುವಿನ ಕೀರ್ತಿ ಶ್ರೀಮಾನ್ ಕೆ.ಎಚ್. ಪಾಟೀಲ್ ಮತ್ತು ಶ್ರೀಮಾನ್ ಡಿ. ದೇವರಾಜ್ ಅರಸ್‌ರವರಿಗೆ ಸಲ್ಲಬೇಕು. ಶ್ರೀಮಾನ್ ದೇವರಾಜ್ ಅರಸ್‌ರವರು ಕರ್ನಾಟಕದ ಏಕೀಕರಣವನ್ನು ಒಪ್ಪುತ್ತಿರಲಿಲ್ಲವಾದರೂ ಜನತೆಯ ಪ್ರೀತಿ, ವಿಶ್ವಾಸ, ಕೂಗಿಗೋಸ್ಕರವಾಗಿ ಪ್ರಜಾಪ್ರಭುತ್ವದಲ್ಲಿ ಒಪ್ಪಬೇಕಾಗುತ್ತದೆಂದು ಅದನ್ನು ಒಪ್ಪಿ ಕೊನೆಗೆ ಅವರಿಬ್ಬರೂ ಒಂದು ತೀರ್ಮಾನಕ್ಕೆ ಬಂದ ಸಂದರ್ಭ ಈಗಲೂ ನನ್ನ ನೆನಪಿನಲ್ಲಿದೆ. ಆಗ ನಾನು ಈ ಸಭೆಯಲ್ಲಿ ಅವರನ್ನು ಅಭಿನಂದಿಸಿದೆ ಮತ್ತು ಹೊರಗಡೆಯೂ ಸಹ ಲಕ್ಷಾಂತರ ಜನರ ಎದುರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸಿದ್ದೆನು. ಈ ರಾಜ್ಯದಲ್ಲಿ ಯಾವುದೇ ಸಂದರ್ಭ ಬಂದರೂ ಶ್ರೀಮಾನ್ ಕೆ.ಎಚ್. ಪಾಟೀಲ್‌ರವರು ದಿಟ್ಟ ನಿಲುವಿನಿಂದ ಸ್ಪಷ್ಟವಾಗಿ ಮಾತನಾಡಿ ತಮ್ಮದೇ ಆದಂಥ ಒಂದು ವ್ಯಕ್ತಿತ್ವವನ್ನು ಸಂಪಾದನೆ ಮಾಡಿದ್ದರು. ಇವೊತ್ತಿನ ಈ ಸಂದರ್ಭದಲ್ಲಿ ಶ್ರೀಮಾನ್ ಕೆ.ಎಚ್. ಪಾಟೀಲ್‌ರವರ ನಿಧನದ ಜೊತೆಗೆ ಇನ್ನು ಕೆಲವು ಹಿರಿಯ ಗಣ್ಯ ವ್ಯಕ್ತಿಗಳ ಬಗ್ಗೆಯೂ ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಇವೊತ್ತು ಸಂತಾಪ ಸೂಚನಾ ಸಭೆ ಮಾಡಿ ನಿರ್ಣಯ ಮಾಡುತ್ತೇವೆ. ಇಂಥ ಮಹನೀಯರುಗಳ ಹೆಸರು ಶತಶತಮಾನಗಳ ಕಾಲ ಉಳಿಯುವುದಕ್ಕೋಸ್ಕರವಾಗಿ ಒಂದು ಸ್ಮಾರಕ ಭವನವನ್ನು ಕಟ್ಟಿಸಬೇಕಾಗಿದೆ. ಇವರುಗಳೆಲ್ಲಾ ಮಹತ್ತರವಾದಂಥ ಸೇವೆ ಮಾಡಿ ದುಡಿದಂತಹವರು. ಅಲ್ಲದೆ, ಈ ಸಭೆಯಲ್ಲಿ ಸೇವೆ ಮಾಡಿದಂಥವರು. ಅವರನ್ನು ಅನೇಕರು ನೆನೆಸಿಕೊಳ್ಳುವುದ ಕ್ಕೋಸ್ಕರವಾಗಿಯದರೂ ಒಂದು ಸ್ಮಾರಕ ಭವನವನ್ನು ನಿರ್ಮಿಸುವುದು ಒಳ್ಳೆಯದು. ಇವೊತ್ತು ಸ್ಮಾರಕ ಭವನವನ್ನು ನಿರ್ಮಿಸಿದರೆ, ಆ ಸ್ಮಾರಕ ಭವನದಲ್ಲಿ, ಅಗಲಿ ಹೋದಂಥ ಹಿರಿಯ ರಾಜಕಾರಣಿಗಳ ವಿಶಿಷ್ಟವಾದಂಥ ಪುಸ್ತಕಗಳು, ಅವರಿಗೆ ಸಂಬಂಧಪಟ್ಟಿರತಕ್ಕಂಥ ವಸ್ತುಗಳನ್ನು ಅಲ್ಲಿ ಇರಿಸಿ, ರಾಜ್ಯದ ಮುಂದಿನ ಪೀಳಿಗೆಗೆ ಅನುಕೂಲವಾಗುವಂಥ ಒಂದು ಕೆಲಸವನ್ನು ಮಾಡಬೇಕಾದ್ದು ನಮ್ಮ ಕರ್ತವ್ಯ. ನಾನು ಈ ಬಗ್ಗೆ ಅನೇಕ ಬಾರಿ ಹೇಳಿದ್ದೇನೆ. ಈ ಸಭೆಯಲ್ಲಿ ಅನೇಕ ಹಿರಿಯ ಗಣ್ಯ ವ್ಯಕ್ತಿಗಳ ವಿಚಾರವಾಗಿ ಪ್ರಸ್ತಾಪ ಮಾಡುತ್ತಿದ್ದಾಗ, ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಕುರಿತು ಮಾತನಾಡಿದಾಗ ಅವರ ಮನೆಯನ್ನು ಸ್ಮಾರಕವನ್ನಾಗಿ ಮಾಡಬೇಕೆಂದು ಹೇಳಿದೆ. ಅಂದಿನ ಸಭೆಯಲ್ಲಿ ಶ್ರೀಮಾನ್ ಸಾಹುಕಾರ ಚೆನ್ನಯ್ಯನವರು ಉಪಸ್ಥಿತರಿದ್ದರು. 1967ರಲ್ಲಿ ಅವರು ಒಂದೇ ಒಂದು ಬಾರಿ ಈ ಸಭೆಗೆ ಬಂದದ್ದು. ಅದರ ಹಿಂದೆಯೂ ಬಂದಿರಲಿಲ್ಲ, ಕೊನೆಗೂ ಬರಲಿಲ್ಲ. ನಾವು ಮತ್ತು ನಮ್ಮ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿರುತ್ತಿದ್ದೆವು. ಅವರು ಈ ಸಭೆಯಲ್ಲಿ ಯಜಮಾನಿಕೆಯಿಂದಿದ್ದರು. ಅಲ್ಲದೆ, ಈ ಸಭೆಯಲ್ಲಿ ಶ್ರೀಮಾನ್ ಹೆಚ್.ಎಂ. ಚೆನ್ನಬಸಪ್ಪನವರು, ಶ್ರೀ ಸಿದ್ದವೀರಪ್ಪನವರುಗಳು ಮಾತನಾಡುವುದಕ್ಕೆ, ಎದ್ದು ನಿಂತರೆ ದಿನಗಟ್ಟಳೆ ಮಾತನಾಡುತ್ತಿದ್ದರು. ಇವರುಗಳೆಲ್ಲರೂ ಒಂದಲ್ಲ ಒಂದು ವಿಚಾರದಲ್ಲಿ ಈ ರಾಜ್ಯದಲ್ಲಿ ಅಪರೂಪವಾದಂಥ ವಿಶಿಷ್ಟವಾದಂಥ ಸ್ಥಾನವನ್ನು ಪಡೆದಿರತಕ್ಕಂಥವರು. ಶ್ರೀ ಕೆ.ಸಿ. ರೆಡ್ಡಿಯವರು ಈ ರಾಜ್ಯದ ಪ್ರಪ್ರಥಮ ಮುಖ್ಯಮಂತ್ರಿಗಳಾಗಿದ್ದರು. ಶ್ರೀ ಗೋಪಾಲಗೌಡರು ಸಹ ಈ ರಾಜ್ಯದಲ್ಲಿ ಬಹಳ ವಿಶಿಷ್ಟವಾದಂಥ ಸ್ಥಾನವನ್ನು ಪಡೆದಿರತಕ್ಕಂಥವರು.

ನಾನು ಕಾಡಿ ಬೇಡಿ ವಿಧಾನ ವೀಧಿಯ ಒಂದು ವೃತ್ತಕ್ಕೆ ಅವರ ಹೆಸರನ್ನು ಇಡುವಂತೆ ಮಾಡಿದೆ. ನನಗೆ ಇವತ್ತು ಅದನ್ನು ಹೇಳಿಕೊಳ್ಳಲು ಸಂತೋಷವಾಗುತ್ತದೆ. ಯಾರದೋ ಬೇರೆಯವರ ಹೆಸರಿನಲ್ಲಿ ಆ ವೃತ್ತವನ್ನು ಮಾಡಬೇಕೆಂದಿದ್ದಾಗ, ನಾವು

ಕುಳಿತು, ಸತ್ಯಾಗ್ರಹ ಮಾಡಿ, ನಾನೇ ಅದಕ್ಕೆ ಒಂದು ನಾಮಫಲಕವನ್ನು ಕಟ್ಟಿ, ನಗರಸಭೆಯ ಮೂಲಕ ಅದರ ಬಗ್ಗೆ ವಿಚಾರಮಾಡಿ ಆ ಒಂದು ಕೆಲಸವನ್ನು ಮಾಡಿದೆವು. ಇವತ್ತು ಇಂತಹ ಪರಿಸ್ಥಿತಿಯಲ್ಲಿ ಇವರೆಲ್ಲರನ್ನು ನಾವು ಜ್ಞಾಪಿಸಿಕೊಳ್ಳಬೇಕಾದರೆ, ಮುಂದೆ ನಮ್ಮಲ್ಲಿ ಅವರ ವಿಚಾರವಿರಬೇಕಾದರೆ ಒಂದು ಸ್ಮಾರಕಬೇಕು. ಇಲ್ಲಿ ಬಿ.ಕೆ. ಪುಟ್ಟರಂಗನವರು, ವಿರೋಧ ಪಕ್ಷದ ನಾಯಕರಾಗಿದ್ದರು. ಜೆ.ಬಿ. ಮಲ್ಲರಾಧ್ಯರವರು ವಿರೋಧ ಪಕ್ಷದ ನಾಯಕರಾಗಿದ್ದರು. ಎಷ್ಟೋ ಜನರಿಗೆ ಅವರು ಇಲ್ಲಿಲ್ಲಿದ್ದರು ಎಂಬ ಬಗ್ಗೆ ನೆನಪಿಲ್ಲ, ಶ್ರೀ ಎಸ್. ಸಿದ್ದಯ್ಯನವರು, ಎಸ್.ಆರ್. ಕಂಠಿಯವರು ಹೆಚ್.ಎಸ್. ರುದ್ರಪ್ಪನವರು, ಇವರೆಲ್ಲರೂ ಈ ಸಭೆಯಲ್ಲಿ ತಮ್ಮ ಪೀಠವನ್ನು ಅಲಂಕರಿಸಿದ್ದಂಥವರು. ಇವರೆಲ್ಲರ ಬಗ್ಗೆ ಒಂದು ವಿಶೇಷವಾದಂಥ ಯೋಚನೆಯನ್ನು ತಮ್ಮ ಸರ್ಕಾರದವರು ಮಾಡಿ, ತಾವು ಹೊರಗಡೆ ಸೆಂಟ್ರಲ್ ಹಾಲ್ ಎಂದು ಏನು ಮಾಡಬೇಕೆಂದಿದ್ದೀರಿ ಅಲ್ಲಾದರೂ ಇವರೆಲ್ಲರ ಚಿತ್ರಪಟಗಳನ್ನು ಹಾಕಬೇಕು. ಮತ್ತು ಇವರುಗಳ ಬಗ್ಗೆ ವಿಚಾರವನ್ನು ತಿಳಿದುಕೊಂಡಿರತಕ್ಕ ವಿಚಾರವಂತರಿಂದ ಪುಸ್ತಕವನ್ನು ಬರೆಸಿ ಈ ಪುಸ್ತಕವನ್ನು ಗ್ರಂಥದ ರೂಪದಲ್ಲಿ ತರತಕ್ಕಂಥ ಕೆಲಸ ಆಗಬೇಕಾಗಿದೆ ಮತ್ತು ಇವರುಗಳನ್ನು ನೆನೆಸಿಕೊಳ್ಳತಕ್ಕ ಸ್ಮಾರಕಭವನ ಆಗಬೇಕಾಗಿದೆ. ಆ ಬಗ್ಗೆ ತಾವು ಚಿಂತನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಶ್ರೀಮಾನ್ ಕೆ.ಹೆಚ್. ಪಾಟೀಲರ ವ್ಯಕ್ತಿತ್ವ ನಮಗೆ ಇನ್ನು ಮುಂದೆ ಸಿಗಲಾರದು. ಬಹಳ ಮಹತ್ತರವಾದ ವ್ಯಕ್ತಿತ್ವ ಅವರದು. ಅವರ ಮಾತು ಅವರು ಸಭೆಗೆ ಬಂದು ಮಾತನಾಡತಕ್ಕಂಥದು ಬಹಳ ಮಹತ್ತರವಾದುದು. ಕರ್ನಾಟಕದಲ್ಲಿ ಅವರು ಜೀವನದುದ್ದಕ್ಕೂ ಸಹಕಾರಿ ಆಂದೋಳನವನ್ನು ಮಾಡಿದ್ದಾರೆ. 1967ರಲ್ಲಿ ನಾನು ಅವರ ಜೊತೆ ಇದ್ದಾಗ, ಅವರು ಒಂದು ಸಾರಿ ನನ್ನನ್ನು ಕರೆದು ವಾಟಾಳ್ ನಾವಿಬ್ಬರೂ ಸೇರಿ ಈ ಗಡಿ ವಿಚಾರದಲ್ಲಿ ರಾಜೀನಾಮೆ ಕೊಟ್ಟುಬಿಡೋಣವೆಂದು ಹೇಳಿದ್ದರು. ಜನತಾ ಪಕ್ಷವನ್ನು ಕಟ್ಟಿದಂಥ ಧೀಮಂತ ಶಕ್ತಿ ಅವರದು. ಅವರು ಕೆ.ಎಂ. ನಾಗಣ್ಣನವರು, ಟಿ.ಆರ್. ಶಾಮಣ್ಣನವರು, ಸಿದ್ಧವೀರಪ್ಪನವರು, ಚನ್ನಯ್ಯನವರು, ಟಿ. ಸುಬ್ರಮಣ್ಯಂರವರು, ಇವರೆಲ್ಲ ಸೇರಿ ಒಂದು ಮಹತ್ತರವಾದ ವಿರೋಧಪಕ್ಷವನ್ನು ಈ ರಾಜ್ಯದಲ್ಲಿ ಕಟ್ಟಿದರು. ಅದರ ಕೀರ್ತಿ ಅವರಿಗೆ ಸಲ್ಲತಕ್ಕದ್ದು. ನನಗೆ ಶ್ರೀಮಾನ್ ಪಾಟೀಲರು ಸತ್ತ ಸುದ್ದಿ ತಿಳಿದಿರಲಿಲ್ಲ. ನಾನು ರಸ್ತೆಯಲ್ಲಿ ಬರುವಾಗ ಪತ್ರಿಕೆಯಲ್ಲಿ ದೊಡ್ಡ ದೊಡ್ಡ ಫೋಟೋ ಬಂದಿತ್ತು. ನಾನು ಇದು ಯಾರ ಫೋಟೋ ಎಂದು ತಿಳಿದುಕೊಳ್ಳಲು ಅಂಗಡಿಯಿಂದ ಒಂದು ಪತ್ರಿಕೆಯನ್ನು ತೆಗೆದುಕೊಂಡು ನೋಡಿದಾಗ ಗೊತ್ತಾಯಿತು. ನಾನು ಪ್ರಾಮಾಣಿಕವಾಗಿ ಹೃದಯ ಬಿಚ್ಚಿ ಹೇಳುತ್ತೇನೆ.

ಇವತ್ತು ಅಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅಂತಹ ವ್ಯಕ್ತಿ ಇನ್ನು ನಮಗೆ ಸಿಗುವುದಿಲ್ಲವೆನ್ನತಕ್ಕ ಮಹತ್ತರವಾದ ಮಾತನ್ನು ಹೇಳುತ್ತೇನೆ. ತಾವು ದಯಮಾಡಿ. ಒಂದು ಸ್ಮಾರಕಭವನವನ್ನು ನಿರ್ಮಿಸುವ ಬಗ್ಗೆ ಮತ್ತು ಅವರ ವಿಚಾರದ ಬಗ್ಗೆ ಯೋಚನೆ ಮಾಡಬೇಕು. ನಂತರ ಈ ಸಭೆಯ ಸದಸ್ಯರಾಗಿದ್ದ ಶ್ರೀ ಬಾಬು ಸಾಹೇಬ್ ರಾವ್ ಸಾಹೇಬ್ ಮಹಾಗಾಂಕರ್ ಅವರಿಗೂ ನಮಗೂ ರಾಜಕೀಯದಲ್ಲಿ ಗಡಿ ಸಮಸ್ಯೆಯ ಬಗ್ಗೆ ಹೋರಾಟವಿರಬಹುದು, ಅದು ಇದ್ದೇ ಇದೆ. ಆದರೆ ಮೊನ್ನೆಯ ಸಭೆಯಲ್ಲಿ ಪೇಟವನ್ನು ಧರಿಸುತ್ತಿದ್ದ ಮೂರು ಜನ ಸದಸ್ಯರನ್ನು ಮಾತ್ರ ನೋಡಬೇಕಾಯಿತು. ಇದುವರೆಗೂ 4 ಜನರು ಪೇಟವನ್ನು ಧರಿಸುತ್ತಿದುದನ್ನು ನೋಡುತ್ತಿದ್ದೆವು. ಆದರೆ ಕೇಸರಿ ಬಣ್ಣದ ಪೇಟವನ್ನು ಧರಿಸುವ ಮತ್ತೊಬ್ಬರು ಇಲ್ಲ ಎಂದು ದುಃಖವಾಯಿತು. ಮಹಾರಾಷ್ಟ್ರ ಏಕೀಕರಣದವರಿಗೂ ನಮಗೂ ರಾಜಕೀಯವಾಗಿ ಹೋರಾಟವಿರಬಹುದು. ಆದರೆ ಆ ವ್ಯಕ್ತಿ ಸೌಜನ್ಯ, ಪ್ರೀತಿ, ವಿಶ್ವಾಸವನ್ನು ಗಳಿಸಿದಂಥ

ಮಹಾ ವ್ಯಕ್ತಿ. ಅವರು ನಮ್ಮನ್ನುಅಗಲಿದ್ದಾರೆ. ಆದುದರಿಂದ ಈ ಇಬ್ಬರು ಮಹನೀಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ತಾವು ತಂದಿರತಕ್ಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ SRI QUMARUL ISLAM (Gulbarga): Mr. Speaker Sir, the death of Sri K.H. Patil, is a great loss to the State. The State has lost a dynamic and a very bold leader. Usually the leaders leave many scandals but this leader was not having any scandal. I can quote one of the incidents. In 1978 when I was contesting election tothe Assembly, he was the President of the Reddy Congress and Mr. Mohammd Ali was a very great friend of him and his cabinet collegue. He sent Mr. K.K. Shariff to my house and I had one hour discussion. He told me, Mr. Quamarul Islam I will give you 5 seats by an alliance with the Muslim League but leave the Gulbarga Seat to my friend Mr. Mohammad Ali. I said, sorry sir, you are a very great man; Muslim League can only win the Gulbarga Seat. So, no seat adjustment for Gulbarga is possible. At the time, he said that is was his duty to help Mr. Mohammad Ali as a Friend. He also said that he appreciated my determination. He would be happy if I came successful. Fortunately I got elected and from the Reddy Congress Mr. Bhinanna Khandre and another were elected.

Then, Mr.K.H. Patil congratulated and appreciated me. He was having the quality of encoouraging youngsters. At this juncture I pray almighty allah that his soul may rest in pease and that God give the courage to the family members of the late Sri K.H. Patil to bear his loss. Another of our colleague Mr. Mahagaonkar of MES is not with us today. I pray almighty that his soul may rest in pease and God give the courage to the members of his family to bear his loss. Thank you very much.

SRI B.I. PATIL (Uchagaon) : Mr. Speaker Sir, it was really sad and sudden the demise of Sri Bapusaheb Mahagaonkar, the sitting member of this august house. He has done tremendous work in social, educational and policital field. He evinced keen interest in sports, music and cultural activities. His death caused a great loss to all of us. We pray almighty to give courage to the members of the family of late Mahagaonkar to bear this irreparable loss.

I also join in expressing my heartfelt condolences for the sudden demise of Sri K.H. Patil who a doyen in the co-operative field. I, on behalf of my other colleagues from M.E.S., pray almighty to give strength to bear this irresparable loss.

Thank you.

ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ): ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಕೆ.ಹೆಚ್. ಪಾಟೀಲ್‌ರವರದು ನನ್ನ ಸಂಪರ್ಕ ಸುಮಾರು 20 ವರ್ಷಗಳದ್ದು. ಅವರಿಗೂ

ನನಗೂ ಬಹಳವಾಗಿ ನಿಕಟ ಸಂಪರ್ಕ ಬಂದಿತ್ತು. ನಮ್ಮ ದೊಡ್ಡಬಳ್ಳಾಪುರದ ಸ್ಕೌಟ್ ಕ್ಯಾಂಪ್‌ನಲ್ಲಿ ಒಂದು ಸಾರಿ ಮಿನಿ ನರೋರ ಕ್ಯಾಂಪ್ ಮಾಡಿದರು. ಆಗ ಬಹುಶಃ ಅವರು ಅಧ್ಯಕ್ಷರಾಗಿದ್ದರು. ಅಲ್ಲಿನ ಕೆಲವು ಏರ್ಪಾಡುಗಳನ್ನು ನನಗೇ ವಹಿಸಿದ್ದರು. ಅಲ್ಲಿಂದೀಚೆಗೆ ಅವರಿಗೂ ನನಗೂ ಬಹಳ ನಿಕಟವಾದ ಒಂದು ಸಂಪರ್ಕ ಬೆಳೆದಿತ್ತು. ಸಹಕಾರಿ ರಂಗದಲ್ಲಿ ನಾನು ಅವರಿಂದ ಬಹಳಷ್ಟು ಪಾಠ ಕಲಿತಿದ್ದೇನೆ. ಏನೇ ಆಗಲಿ ಸಹಕಾರಿ ತತ್ವಗಳನ್ನು ಎತ್ತಿ ಹಿಡಿಯಬೇಕು ಸಾಮಾನ್ಯ ಜನತೆಯ ಕಲ್ಯಾಣಕೋಸ್ಕರ ಆ ತತ್ವಗಳನ್ನು ಎತ್ತಿ ಹಿಡಿಯಬೇಕು ಎಂಬ ಭಾವನೆ ಅವರಿಗೆ ಏನು ಇತ್ತು ಆ ಭಾವನೆಯನ್ನು ನಾನು ಕೂಡ ಅನುಸರಿಸಿಕೊಂಡು ಬಂದಿದ್ದೇನೆ. ಒಂದು ಸಾರಿ ಬಹುಶಃ ಸಿಂಧ್ಯರವರು ನನ್ನ ಜೊತೆಯಲ್ಲಿ ಬಂದಿದ್ದರೆಂದು ಕಾಣುತ್ತದೆ. ಅವರ ಮನೆಗೆ ಬೆಳಿಗ್ಗೆ ಹೋಗಿದ್ದೆವು. ಈ ಹಳ್ಳಿ ಸಹಕಾರ ಸಂಘಗಳೆಲ್ಲಕ್ಕೂ ಪ್ರಾಥಮಿಕ ಸಹಕಾರಸಂಘದಲ್ಲಿ ನೀವು ನಾಮಿನೇಶನ್ ಹಾಕುತ್ತಿದ್ದೀರಿ, ನಿಮ್ಮ ಜನ್ಮ ಹಕ್ಕು ಏನು ಇತ್ತು ಎಂದರೆ

ಈ ನಾಮಕರಣ ಪದ್ಧತಿಯನ್ನೇ ರದ್ದುಮಾಡಬೇಕೆಂದು ಮೊದಲಿನಿಂದ ಹೇಳುತ್ತಿದ್ದಿರಿ. ಈಗ ನಾಮಕರಣ ಮಾಡುವುದಕ್ಕೆ ಹೊರಟಿದ್ದೀರಲ್ಲಾ ಇದರಿಂದ ಪರಿಸ್ಥಿತಿ ಏನಾಗಬಹುದು ಮತ್ತು ರಾಷ್ಟ್ರ ಮಟ್ಟದಲ್ಲಿ ನಿಮ್ಮ ಗೌರವ ಘನತೆಗಳು ಏನಾಗಬಹುದೆಂದು ನಾನು ಕೇಳಿದೆ. ಅದಕ್ಕೆ ಅವರು, ಬಹಳ ಒತ್ತಡವಿದೆ, ನಾನು ರಾಜೀನಾಮೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇನೆ ಜಾಲಪ್ಪನವರೆ, ಏನು ಮಾಡಲಿ ವಿಧಿ ಇಲ್ಲವೆಂದು ಹೇಳಿದರು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಮತ್ತು ಶಾಸಕರಿಂದ ಅವರ ಮೇಲೆ ಒತ್ತಡ ಬಂದಿದೆಯಂತೆ. ಯಾವಾಗ ಅವರು ರಾಜೀನಾಮೆ ಸುದ್ದಿ ಎತ್ತಿದರು ಆಗ ನಾವು ಸುಮ್ಮನೆ ಬಂದೆವು. ಸರಿ ಸ್ವಾಮಿ, ಹಣೆಬರಹ ಏನು ಇದೆಯೋ ಅದು ಆಗಲಿಯೆಂದು ಹೇಳಿ ಬಂದೆವು. ಅಷ್ಟೊಂದು ತತ್ವಗಳನ್ನು ಅವರು ಇಟ್ಟುಕೊಂಡಿದ್ದರು. ನಾನು ಮಂತ್ರಿಯಾಗಿದ್ದಾಗ ಬಹಳಷ್ಟು ಸಲಹೆಗಳನ್ನು ನನಗೆ ಕೊಟ್ಟಿದ್ದಾರೆ. ನಾನು ಕಷ್ಟ ಕಾಲದಲ್ಲಿ ಅವರ ಹತ್ತಿರ ಹೋಗಿ ಇದಕ್ಕೆ ಏನು ಮಾಡಬೇಕು, ಇದಕ್ಕೆ ಏನು ಮಾಡಬೇಕು ಎಂದು ಸಲಹೆ ಕೇಳಿದ್ದೇನೆ. ಹಲವು ಬಾರಿ ಸದನದಲ್ಲಿ ನನಗೆ ಅವರು ಉತ್ತೇಜನ ಕೊಟ್ಟು ನಾನು ತಂದ ಕೆಲವು ತಿದ್ದುಪಡಿಗಳಿಗೆ ಅವರೇ ಒಳ್ಳೆಯ ಸಹಕಾರ ಕೊಟ್ಟಿದ್ದೂ ಉಂಟು. ಉದಾಹರಣೆಗೆ ಹೇಳಬೇಕಾದರೆ, ಒಂದು ಸಾರಿ ಈ ವ್ಯವಸಾಯೋತ್ಪನ್ನಗಳ ಸಂಹಿತೆಗಳ ಕಾನೂನುಗಳನ್ನು ಬದಲಾವಣೆ ಮಾಡುವುದಕ್ಕೆ ಒಂದು ಅಮೆಂಡ್‌ಮೆಂಟ್ಸ್‌ನ್ನು ಇಲ್ಲಿ ತಂದೆವು. ನಮ್ಮ ಪಕ್ಷದಲ್ಲಿ ಮೂರು ದಿವಸ ಚರ್ಚೆಯಾಯಿತು. ಕಡೆಗೂ ಅದನ್ನು ಮೂವ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದರು. ಅಮೆಂಡ್‌ಮೆಂಟ್ ತಂದಾಗ ಒಂದೇ ಒಂದು ಮಾತು ಹೇಳಿದರು, ಅದು ಕಡತಕ್ಕೆ ಹೋಗಿದೆ. ಇದನ್ನು 30 ವರ್ಷಗಳಿಂದ ನಮ್ಮ ಪಕ್ಷ ತರಲಿಕ್ಕೆ ಆಗಲಿಲ್ಲ, ಇದು ವೆಸ್ಟಡ್ ಇಂಟರೆಸ್ಟ್, ವೆಸ್ಟೆಡ್ ಇಂಟರೆಸ್ಟ್‌ನಿಂದ ಇದನ್ನು ತರಲಿಕ್ಕೆ ಆಗಲಿಲ್ಲ ಜಾಲಪ್ಪನವರು ಇದನ್ನು ತಂದಿದ್ದಾರೆ, ಅವರು ತಮ್ಮ ಅಧಿಕಾರ ಹೋದರೂ ಚಿಂತೆ ಇಲ್ಲವೆಂದು ಹೇಳಿ ಇಂತಹ ಬದಲಾವಣೆಗಳನ್ನು ತಂದಿದ್ದಾರೆ. ಯಾವುದೇ ಚರ್ಚೆ ಇಲ್ಲದೆ ಇದನ್ನು ಒಪ್ಪಿಕೊಳ್ಳಲಾಯಿತೆಂದು ಕಡತಕ್ಕೆ ಹೋಗಲಿ ಅಧ್ಯಕ್ಷರೆ ಎಂದು ಅವರು ಹೇಳಿದರು.

12.00 ಪಿ.ಎಂ.

ನನಗೆ ಇವತ್ತು ಕಣ್ಣಲ್ಲಿ ನೀರು ಬಂತು. ಏಕೆಂದರೆ ಮನುಷ್ಯನಾದವನು ಬಹಳಷ್ಟು ವೇದಾಂತವನ್ನು ಹೇಳಬಹುದು. ಆದರೆ ಅದನ್ನು ಅನುಸರಿಸುವುದು ಬಹಳ ಕಷ್ಟ. ಆದರೆ ಈ ಮನುಷ್ಯ ಅಂಥವರಲ್ಲ. ಅದನ್ನು ಆಚರಣೆ ಮಾಡುತ್ತಿದ್ದರು. ರೈತರ

ಬಗ್ಗೆ ಅಷ್ಟೊಂದು ಕಳಕಳಿ ಇತ್ತು. ವ್ಯವಸಾಯೋತ್ಪನ್ನ ಮಾರಾಟ ಸಮಿತಿಗಳಲ್ಲಿ ಏನು ರೈತರ ಶೋಷಣೆ ನಡೆಯುತ್ತಿತ್ತು ಎಂಬುದು ಅವರಿಗೆ ಗೊತ್ತಿತ್ತು. ಆದುದರಿಂದ ಇಂಥ ಪರಿಸ್ಥಿತಿಯನ್ನು ಯಾವ ರೀತಿ ನಿವಾರಣೆ ಮಾಡಬೇಕೆಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು. ಆದುದರಿಂದ ನಾನು ಅವತ್ತು ತಂದಿದ್ದಂಥ ತಿದ್ದುಪಡಿಗೆ ಅವರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಆದುದರಿಂದ ನಾನು ಅವತ್ತು ತಂದಿದ್ದಂಥ ತಿದ್ದುಪಡಿಗೆ ಅವರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಅವರು ಎಷ್ಟರಮಟ್ಟಿಗೆ ನನ್ನಮೇಲೆ ವಿಶ್ವಾಸವನ್ನು ಇಟ್ಟಿದ್ದರು ಎಂದರೆ, 1988ರ ಮಾರ್ಚಿ 29ನೇ ತಾರೀಖು ನಾನು ಆ ಕಡೆ ಕುಳಿತಿದ್ದಾಗ ಒಂದು ಚೀಟಿಯನ್ನು ನನಗೆ ಕಳುಹಿಸಿದರು. ಅದರಲ್ಲಿ ದಯವಿಟ್ಟು ಹಿಂದುಗಡೆಗೆ ಬನ್ನಿ ನಿಮ್ಮ ಜೊತೆ ಸ್ವಲ್ಪ ಮಾತನಾಡಬೇಕು ಎಂದು ಬರೆದಿದ್ದರು. ನಾನು ಅಲ್ಲಿಗೆ ಹೋದಾಗ ಅವರು ರಷೀದ್ ಕೇಸ್ ಬಗ್ಗೆ ಏನಾಗಿದೆ ಎಂಬುದು ನಿಮಗೆ ಗೊತ್ತೆ ಎಂದು ಕೇಳಿದರು.

ಅದಕ್ಕೆ ನಾನು ಹೇಳಿದೆ, ನನಗೆ ಏನೂ ಗೊತ್ತಿಲ್ಲ, ನಾನು ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ, ಅದು ಏನಾಗಿದೆಯೋ ಗೊತ್ತಿಲ್ಲ ಎಂದು ಹೇಳಿದೆ. ಅದಕ್ಕೆ ಅವರು ಹೇಳಿದರು, ನೀವು ತಪ್ಪು ತಿಳಿದುಕೊಂಡಿದ್ದೀರಿ, ಎಲ್ಲಾ ಇನ್‌ಸ್ಟ್ರಕ್ಷನ್‌ನ್ನೂ ಕೊಟ್ಟಿದ್ದಾರೆ, ನಿಮ್ಮನ್ನು ಇಂಪ್ರಿಸನ್ ಮಾಡುತ್ತಿದ್ದಾರೆ, ಬೀ ಕೇರ್‌ಫುಲ್ ಎಂದು ಹೇಳಿದರು ನನಗೆ ಗಾಬರಿಯಾಯಿತು. ತಕ್ಷಣ ನಮ್ಮ ಅಧಿಕಾರಿಗಳನ್ನು ಕರೆದು ಕೇಳಿದೆ. ಆದರೆ ಅದು ಅನಂತರ ಏನೇನೋ ಆಯಿತು; ಅದನ್ನು ಅನುಭವಿಸಿದ್ದೂ ಆಯಿತು. ಅದನ್ನು ಬಿಡಿ. ಕಡೆಗೆ ಮಾನ್ಯ ಪಾಟೀಲರು ಎಂದು ಹೇಳಿದರು. ನಾನು ಅಲ್ಲಿಗೆ ಹೋದಾಗ ಅವರು ಆಫೀಸ್ ರೂಂನಲ್ಲಿ ಕುಳಿತಿದ್ದರು. ಬಸ್ಸುಗಳು ಸರಿಯಾಗಿ ಬರುತ್ತಿಲ್ಲ ಎಂದು ಹುಡುಗರು ರಸ್ತೆ ರೋಖೋ ಮಾಡಿದ್ದರು. ಇದರಿಂದಾಗಿ ಮಾನ್ಯ ಪಾಟೀಲರು ಮುಂದಕ್ಕೆ ಹೋಗಲಾರದೆ ವಾಪಸು ಬಂದಿದ್ದರು. ಅಲ್ಲಿ ಯಾರೋ ಹೇಳಿದರಂತೆ ಇಲ್ಲಿ ದೇವರಾಜ ಅರಸ್‌ರವರ ಮೆಡಿಕಲ್ ಕಾಲೇಜು ಇದೆ. ಅಲ್ಲಿ ನೀವು ರೆಸ್ಟ್ ತೆಗೆದುಕೊಳ್ಳಿ ಅಷ್ಟರಲ್ಲಿ ನಾವು ಇದನ್ನು ಕ್ಲಿಯರ್ ಮಾಡಿಸುತ್ತೇವೆಂದು ಹೇಳಿದರೆಂತೆ.

ಹೀಗಾಗಿ ಅವರು ಅಕಸ್ಮಾತ್ತಾಗಿ ಅಲ್ಲಿಗೆ ಬಂದಿದ್ದರು. ನಾನು ಅವರನ್ನು ನೋಡಿದಾಗ ನನಗೆ ಬಹಳ ಗಾಬರಿಯಾಯಿತು. ಏಕೆಂದರೆ, ಅವರ ಆರೋಗ್ಯ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿತ್ತು. ಅವರಿಗೆ ನಿಲ್ಲುವುದಕ್ಕಾಗುತ್ತಿರಲಿಲ್ಲ, ಕುಳಿತು ಕೊಂಡಿದ್ದಾಗಲೂ ಕೂಡ ಅವರ ಕೈ ಕಾಲುಗಳು ನಡುಗುತ್ತಿದ್ದುವು ಅವರನ್ನು ನೋಡಿದ ಮೇಲೆ ನಾನು ನಮ್ಮಲ್ಲಿ ಬೆಳೆದಿದ್ದಂಥ ಸ್ವಲ್ಪ ಗುಲಾಬಿ ಹೂವಿನ ಗೊಂಚಲನ್ನು ಆದ ಕೈಗೆ ಕೊಟ್ಟು ದೇವರು ನಿಮಗೆ ಒಳ್ಳೆಯದನ್ನು ಮಾಡಲಿ, ಬೇಗ ಗುಣಮುಖರಾಗಿ ಬನ್ನಿ ಎಂದು ಹಾರೈಸಿ ಕಳುಹಿಸಿದೆ. ಆದರೆ ಅವರು ಮದ್ರಾಸ್‌ನಲ್ಲಿ ತೀರಿಕೊಂಡಮೇಲೆ ರಾತ್ರಿ 10.30 ಗಂಟೆಗೆ ವರ್ತಮಾನ ಬಂದಾಗ ನನಗೆ ಬಹಳ ಸಂಕಟವಾಯಿತು. ಇಂಥ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಅವರಿಗೆ ಸಹಕಾರ ತತ್ವಗಳ ಬಗ್ಗೆ ಏನು ಕಮಿಟ್‌ಮೆಂಟ್ಸ್ ಇತ್ತೋ ಅದನ್ನು ನಾವು ಮುಂದುವರಿಸಿಕೊಂಡು ಹೋಗಬೇಕು. ಇಂಥವರ ಸ್ಮರಣಾರ್ಥ ನಾವು ನಿರ್ಮಿಸುವಂಥ ಸೌಧಗಳಿಂದ ಏನೂ ಪ್ರಯೋಜನವಾಗುವುದಿಲ್ಲ, ಅವರು ಬಿಟ್ಟು ಹೋಗಿರತಕ್ಕ ಮತ್ತು ಅವರು ನಂಬಿಕೆಯನ್ನು ಇಟ್ಟುಕೊಂಡಿದ್ದಂಥ ತತ್ವಗಳನ್ನು ನಾವು ಆಚರಿಸಿಕೊಂಡು ಹೋಗುವುದೇ ನಿಜವಾಗಿ ನಾವು ಅವರಿಗೆ ಕೊಡತಕ್ಕ ಒಂದು ಗೌರವ. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಯಾರಾದರೂ ಈ ತತ್ವಗಳಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುವವರನ್ನು ತಾವು ಸಹಕಾರ ಮಂತ್ರಿಗಳನ್ನಾಗಿ ಮಾಡಿಕೊಳ್ಳಿ. ಇಷ್ಟು ಹೇಳಿ ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ ಮತ್ತು ಅವರ ಕುಟುಂಬವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಇದೇ ರೀತಿ ಸನ್ಮಾನ್ಯ ಬಾಬು ಸಾಹೇಬ್, ರಾವ್ ಸಾಹೇಬ್ ಮಡ್‌ಗಾಂವ್‌ಕರ್‌ರವರೂ ಕೂಡ ಈ ಮನೆಯ ಒಬ್ಬ ಗೌರವಾನ್ವಿತ ಸದಸ್ಯರಾಗಿದ್ದರು. ಅವರ ನಿಧನದಿಂದ ನಮ್ಮ ರಾಜ್ಯಕ್ಕೆ ಬಹಳಷ್ಟು ನಷ್ಟವಾಗಿದೆ. ಅವರ ಆತ್ಮಕ್ಕೆ ಕೂಡ ಭಗವಂತನು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ): ಸನ್ಮಾನ್ಯ ಅಧ್ಯಕ್ಷರೆ, ಗತಿಸಿರತಕ್ಕ ಮಾನ್ಯ ಕೆ.ಹೆಚ್. ಪಾಟೀಲರ ಬಗ್ಗೆ ನಾವು ಇಲ್ಲಿ ಮಾತನಾಡಬೇಕಾಗಿ ಬಂದಿದೆಯಲ್ಲಾ ಎಂಬ ದುಃಖ ನಮ್ಮ ಮನಸ್ಸಿಗೆ ಬಂದಿದೆ. ಏಕೆಂದರೆ, ಈ ರಾಜ್ಯಕ್ಕಾಗಿ ಬಹಳವಾಗಿ ದುಡಿದು, ಮಂತ್ರಿಯಾಗಿ, ಸಾಮಾನ್ಯ ಸದಸ್ಯರಾಗಿ, ಅನೇಕ ಕ್ಷೇತ್ರಗಳಲ್ಲಿ ಕೆಲಸಮಾಡಿರತಕ್ಕ ಅವರಿಂದ ನಾವು ಸಾಕಷ್ಟು ಪ್ರಯೋಜನವನ್ನು ಪಡೆದುಕೊಂಡಿದ್ದೇವೆ. ರೈತ ಹೆಚ್ಚಿಗೆ ಬೆಳೆಯುವುದಕ್ಕೆ ಬೆಳೆದುದನ್ನು ಕೂಡಿಡುವುದಕ್ಕೆ ಅಥವಾ ಕೂಡಿಟ್ಟದ್ದನ್ನು ಸರಿಯಾದ ಬೆಲೆಗೆ ಮಾರಾಟ ಮಾಡುವುದಕ್ಕೆ ಇತ್ಯಾದಿ ಎಲ್ಲ ವ್ಯವಸ್ಥೆಗಳನ್ನೂ ಕ್ರಮವಾಗಿ ಮಾಡಬೇಕಾದರೆ ಕೇವಲ ಈ ಸಹಕಾರ ಸಂಘಗಳ ಮುಖಾಂತರ ಮಾತ್ರ ಸಾಧ್ಯ. ಈ ಸಹಕಾರ ಸಂಘಗಳು ಸಾಕಷ್ಟು ಪ್ರಬಲವಾಗಿ ಬೆಳೆಯಬೇಕು, ಇದರಿಂದ ಹೆಚ್ಚಿನ ಪ್ರಯೋಜನ ಸಿಕ್ಕಬೇಕೆಂಬ ದೃಷ್ಟಿಯಿಂದ ಸಹಕಾರ ಸಂಘಗಳನ್ನು ಸರಿಪಡಿಸುವುಕ್ಕೆ ಸರ್ವ ಪ್ರಯತ್ನವನ್ನೂ ಅವರು ಮಾಡಿದ್ದರು.

ಇದರಿಂದ ಹೆಚ್ಚು ಪ್ರಯೋಜನ ಸಿಗಬಹುದು ಎಂಬ ಉದ್ದೇಶದಿಂದ ಸಹಕಾರಿ ಸಂಘಗಳನ್ನು ಸೇರಿಸುವುದಕ್ಕೆ ಸರ್ವ ಪ್ರಯತ್ನ ಮಾಡಿದರು. ಅಂಥ ವಿಷಯಗಳಲ್ಲಿ ಹೆಚ್ಚಿಗೆ ಮಾಹಿತಿಯನ್ನು ಪಡೆದು ಉತ್ತಮವಾದಂಥ ಕೆಲಸಗಳನ್ನು ಮಾಡಿಕೊಂಡು ಬಂದರು. ತಾವು ಮಾಡಬೇಕಾದಂಥ ಕೆಲಸ ಇನ್ನೂ ಹೆಚ್ಚಿಗೆ ಎನ್ನುವ ಅರಿವು ಅವರಿಗೆ ಇತ್ತು. ಇಷ್ಟರಿಂದಲೇ ಪ್ರಯೋಜನವಾಗುವುದಿಲ್ಲ, ಆ ಕ್ಷೇತ್ರವನ್ನು ಇನ್ನೂ ಪ್ರಬಲವಾಗಿ ಬೆಳೆಸಬೇಕೆನ್ನುವುದು ಒಂದು ಭಾಗವಾದರೆ ಅವರ ಪ್ರತಿನಿತ್ಯದ ಆಡಳಿತದ ಬಗ್ಗೆ ಅವರು ವಹಿಸುತ್ತಿದ್ದಂಥ ಆಸಕ್ತಿ, ಜವಾಬ್ದಾರಿ ಅಷ್ಟಿಷ್ಟಲ್ಲವೆನ್ನುವುದನ್ನು ಸ್ಪಷ್ಟವಾಗಿ ನಾವು ಕಾಣಬಹುದು. ಅವರು ಅರಣ್ಯ ಮಂತ್ರಿಗಳಾಗಿದ್ದಾಗ ಎಲ್ಲಾದರು ಒಂದು ಕಡೆ ಕಳ್ಳತನವಾಗುತ್ತಿದೆ ಎಂದು ತಿಳಿದರೆ, ಆಗ ರಾತ್ರಿ ಎಷ್ಟು ಹೊತ್ತಾಗಿದ್ದರೂ ವರ್ತಮಾನ ಗೊತ್ತಾದಕೂಡಲೇ ಹೊರಟು ಅದನ್ನು ಪತ್ತೆ ಮಾಡುವುದಕ್ಕೆ ನಿರ್ಭಯವಾಗಿ ಕೆಲಸ ಮಾಡುತ್ತಿದ್ದಂಥ ಒಬ್ಬ ಆಡಳಿತಗಾರರೆಂದು ಇಲ್ಲಿ ಉದಾಹರಣೆಯಾಗಿ ನಾನು ಹೇಳಬೇಕಾಗಿದೆ. ಏತಕ್ಕೆಂದರೆ ಅರಣ್ಯ ಸಂಪತ್ತಿನ ಕಳ್ಳತನವನ್ನು ಪತ್ತೆ ಮಾಡುವುದರಲ್ಲಿ ಪ್ರಾಣಭಯ ಇದೆ ಎನ್ನುವುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಆದ್ದರಿಂದ ಆ ಕೆಲಸವನ್ನು ಸಮರ್ಪಕವಾಗಿ ಮಾಡುವುದಕ್ಕೆ ಎಷ್ಟು ವಿಶೇಷವಾದ ಕೆಲಸ ಮಾಡಬೇಕು ಎನ್ನುವುದಕ್ಕಿಂತ ಎಷ್ಟು ಆತುರಾತುರವಾಗಿ ಕೆಲಸಮಾಡಬೇಕೋ ಅದನ್ನು ಮಾಡುತ್ತಿದ್ದುದನ್ನೂ ನಾವು ಕಣ್ಣಾರೆ ಕಂಡಿದ್ದೇವೆ. ಅಷ್ಟು ಮಾತ್ರವಲ್ಲ, ಅನೇಕರಿಗೆ ಗೊತ್ತಿದೆಯೋ ಇಲ್ಲವೋ ಇನ್ನು ಎರಡು ದಿವಸಗಳಲ್ಲಿ ಪ್ರಾಣ ಹೋಗುತ್ತಿದೆ ಎನ್ನುವಾಗ ಫೈಲುಗಳನ್ನು ತರಿಸಿ, ಯಾವುದು ಉಳಿದಿದೆ, ಯಾವುದು ಅವಶ್ಯಕವಾದಂಥ ಫೈಲು ಎನ್ನುವುದನ್ನು ನೋಡದೆ ಎಲ್ಲ ಫೈಲುಗಳನ್ನು ನಾನು ನೋಡಬೇಕು, ನನ್ನ ರುಜುವಾಗಬೇಕು ಎಂದು ಹೇಳಿ ಅದೇ ರೀತಿ ಕೆಲಸ ಮಾಡುತ್ತಿದ್ದಂಥ ಎಚ್ಚರಿಕೆ

ಅವರಲ್ಲಿತ್ತೆಂದ ಮೇಲೆ, ಆಡಳಿತ ದಕ್ಷತೆಯ ವಿಷಯದಲ್ಲಿ ಅವರಿಗೆ ಎಷ್ಟರಮಟ್ಟಿಗೆ ಆಸಕ್ತಿ ಇತ್ತು ಎನ್ನುವುದನ್ನು ನಾವು ನೋಡಬಹುದು.

ಅವರ ಕುಟುಂಬದಲ್ಲಿ ಅವರು ಮಾತ್ರವಲ್ಲ, ಅವರ ತಂದೆಯವರ ಕಾಲದಿಂದಲೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು. ಅವರ ಊರಿಗೆ ಹೋದಂಥ ನಮ್ಮ ರಾಷ್ಟ್ರದ ನಾಯಕ ಶ್ರೀಯುತ ಜವಾಹರಲಾಲ್ ನೆಹರೂರವರು ಕೂಡ ಅವರು ಮಾಡುತ್ತಿದ್ದಂಥ ಕೆಲಸಗಳನ್ನು ನೋಡಿ ಬಂದಿರುತ್ತಾರೆ. ಈ ಹಿನ್ನೆಲೆಯನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಶ್ರೀಮಾನ್ ಕೆ.ಹೆಚ್. ಪಾಟೀಲ್‌ರವರಿಗೆ ರಾಜಕೀಯ ಹಿನ್ನೆಲೆಗಿಂತ ಮುಖ್ಯವಾಗಿ ರಾಷ್ಟ್ರದ ಸ್ವಾತಂತ್ರ್ಯದ ಬಗ್ಗೆ ಇದ್ದಂಥ ಆಸಕ್ತಿ ಸ್ಪಷ್ಟವಾಗಿ ರಕ್ತಗತವಾಗಿತ್ತೆಂಬುದು ತೋರಿಸುವುದಕ್ಕೋಸ್ಕರವಾಗಿ ಇದನ್ನು ಉದಾಹರಣೆಯಾಗಿ ಹೇಳಿದೆ. ಸಾಮಾನ್ಯವಾಗಿ ಸಹಕಾರ ಸಂಘಗಳ ವಿಷಯದಲ್ಲಿ ಮಾತ್ರವಲ್ಲ, ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಯೋಜನೆಯ ಬಗ್ಗೆಯೂ ಅನೇಕ ಬದಲಾವಣೆಗಳಾಗಬೇಕೆಂದು ಸ್ನೇಹಿತರು ಅವರ ಗಮನಕ್ಕೆ ತಂದಾಗ ಎಷ್ಟರಮಟ್ಟಿಗೆ ಎಲ್ಲಿ ಯಾವುದನ್ನು ಬದಲಾವಣೆ ಮಾಡಬೇಕು, ಮೊದಲಿನಿಂದಲೂ ಇರುವುದನ್ನೇ ಉಳಿಸಿಕೊಂಡು ಹೋಗಬೇಕೆ, ಬೇಡವೇ ಎನ್ನುವ ವಿಷಯದಲ್ಲಿ ಆತುರಪಡಬಾರದು ಎನ್ನುವ ಅಭಿಪ್ರಾಯ ಅವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ಇದೆಲ್ಲ ಅವರ ಆಡಳಿತ ವೈಖರಿಯನ್ನು ನೋಡಿದ ನಮಗೆಲ್ಲರಿಗೂ ಅದು ಅನುಕರಣೀಯವಾಗಿತ್ತು ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಹೇಳಬಹುದು.

1957ನೇ ಇಸವಿಯಲ್ಲಿ ಎದುರು ಪಕ್ಷದಲ್ಲಿ ಸುಮಾರು 93ಜನ ಸದಸ್ಯರು ಕೆಲಸ ಮಾಡುತ್ತಿದ್ದಾಗ ಶ್ರೀಮಾನ್ ಶಿವಪ್ಪನವರು, ಶ್ರೀಮಾನ್ ಗೋಪಾಲ ಗೌಡರು, ಮಾನ್ಯ ಸಾಹುಕಾರ್ ಚೆನ್ನಯ್ಯನವರು, ಮಾನ್ಯ ಸಿದ್ದವೀರಪ್ಪನವರು, ಮಾನ್ಯ ಕೆ.ಹೆಚ್. ಪಾಟೀಲರಾದಿಯಾಗಿ ಅಲ್ಲಿ ಕೆಲಸ ಮಾಡುತ್ತಿದ್ದರು. ಆಗ ನನ್ನ ಭಾಗ್ಯದಿಂದ ಎದುರುಪಕ್ಷದಲ್ಲಿ ಚೀಫ್‌ವಿಪ್ ಆಗಿ ಕೆಲಸ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಯಾರು ಯಾರು ಯಾವ ಯಾವ ವಿಷಯದ ಮೇಲೆ ಮಾತನಾಡಬೇಕೆನ್ನುವ ಬಗ್ಗೆ ಮತ್ತು ಎಷ್ಟೆಷ್ಟು ಅವಕಾಶವನ್ನು ಕೊಡಬೇಕೆನ್ನುವ ಬಗ್ಗೆ ಕೂಡ ಅವರು ಸ್ಪಷ್ಟವಾಗಿ ಹೇಳುತ್ತಿದ್ದರು. ನಾನು ಇಂಥ ವಿಷಯದ ಮೇಲೆ ಮಾತನಾಡಬೇಕು, ಹೇಗಾದರೂ ಮಾಡಿ ನನಗೆ ಇಷ್ಟು ಕಾಲ ಒದಗಿಸಿಕೊಡಬೇಕೆಂದು ಹೇಳಿದರೆ ಅಷ್ಟು ಕಾಲವಕಾಶವನ್ನು ಒದಗಿಸಿಕೊಡುತ್ತಿದ್ದಂಥ ಸ್ನೇಹಿತರು ಬಹಳ ಜನರಿದ್ದರು. ಮಾನ್ಯ ಪಾಟೀಲ್‌ರವರು ಮಾನ್ಯ ಗೋಪಾಲ ಗೌಡರ ವರ್ಗಕ್ಕೆ ಸೇರಿದವರಾಗಿದ್ದರು. ಈ ಮನೆಯಲ್ಲಿ ನಡೆಯಬೇಕಾದ ಕೆಲಸದ ಬಗ್ಗೆ ಆಸಕ್ತಿ ಮಾತ್ರವಲ್ಲ, ಅವರು ಹೇಳತಕ್ಕಂಥ ವಿಷಯ ಬಹಳ ಪ್ರಯೋಜನಕಾರಿಯಾಗಿದ್ದು ಈ ಸಭೆಯಲ್ಲಿ ಸ್ಪಷ್ಟವಾಗಿ ವಿಷಯದ ಬಗ್ಗೆ ದೀರ್ಘವಾಗಿ ಚರ್ಚೆಯಾಗುತ್ತಿತ್ತು, ಆ ಕಾಲದಲ್ಲಿ ಆಡಳಿತ ಪಕ್ಷಕ್ಕಿಂತ ಎದುರುಪಕ್ಷದ ತಲೆಗಳ ಮೇಲೆ, ಅವರು ವಹಿಸುತ್ತಿದ್ದಂಥ ಆಸಕ್ತಿ ಆಡಳಿತಪಕ್ಷಕ್ಕಿಂತ ಹೆಚ್ಚಿನದಿತ್ತೆನ್ನುವುದನ್ನು ಅವರು ಸ್ಪಷ್ಟಪಡಿಸಿದ್ದರು.

ಇಂಥ ಸಂದರ್ಭದಲ್ಲಿ ಕೆಲಸ ಮಾಡಿದವರು ಕೆ.ಹೆಚ್. ಪಾಟೀಲರು ಮತ್ತು ಗೋಪಾಲ ಗೌಡರು ವಗೈರೆ ಹಿರಿಯರು. ಇಂಥ ಒಬ್ಬ ವ್ಯಕ್ತಿಯನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಅವರು ತಮ್ಮ ಅಂತ್ಯ ಕಾಲದಲ್ಲೂ ಸಹ ದೇಶದ ಬಗ್ಗೆ ಚಿಂತನೆ ಮಾಡುತ್ತಿದ್ದರು. ನಮಗೆ ಕೇಂದ್ರದಲ್ಲಿ ಸಾಕಷ್ಟು ಬಹುಮತ ಇಲ್ಲವೆಂದು ಯೋಚನೆ ಮಾಡುತ್ತಿದ್ದರು ಎಂದು ಅನೇಕ ಸಂದರ್ಭಗಳಲ್ಲಿ ನಾವು ಕೇಳಿದ್ದೇವೆ. ಆದುದರಿಂದ ರಾಷ್ಟ್ರದ ರಾಜ್ಯದ ಹಿತದ ಬಗ್ಗೆ ಅದರಲ್ಲೂ ಮುಖ್ಯವಾಗಿ ರೈತರ ಅಭಿವೃದ್ಧಿಯ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದ ನಾಯಕರನ್ನು ಕಳೆದುಕೊಂಡಿದ್ದೇವೆ.

ಅವರು ಆತ್ಮಕ್ಕೆ ಚಿರಶಾಂತಿ ದೊರೆಯಲಿ ಮತ್ತು ಅವರ ನಿಧನದಿಂದ ಅವರ ಬಂಧುಗಳಿಗೆ ಮಿತ್ರರಿಗೆ ಉಂಟಾಗಿರುವ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು): ಸನ್ಮಾನ್ಯ ಅಧ್ಯಕ್ಷರೆ ತಾವು ಈ ದಿವಸ ಶ್ರೀ ಕೆ.ಹೆಚ್. ಪಾಟೀಲರ ಬಗ್ಗೆ ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಅನುಮೋದನೆಯನ್ನು ಸೂಚಿಸುತ್ತಾ, ಈಗಾಗಲೇ ಈ ಸಭೆಯಲ್ಲಿ ಮಾನ್ಯ ಸಭಾನಾಯಕರು ದಿವಂಗತ ಪಾಟೀಲರ ಬಗ್ಗೆ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷರು ಹಾಗು ಈ ಮನೆಯ ಹಾಲಿ ಸದಸ್ಯರಾಗಿದ್ದ ಶ್ರೀ ಬಾಬು ಸಾಹೇಬ್ ರಾವ್‌ಸಹೇಬ್ ಮಹಾಗಾಂವ್‌ಕರ್ ಅವರ ಬಗ್ಗೆ ಸಾಕಷ್ಟು ಹೇಳಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಮತ್ತು ಪಾಟೀಲರ ವೈಯಕ್ತಿಕ ಸ್ನೇಹ ಎರಡು ಮಾತನ್ನು ಆಡಬೇಕೆಂದು ಪ್ರೇರಣೆ ಕೊಟ್ಟಿದೆ. ಸುಮಾರು 1957-58ರಲ್ಲಿ ಎಂದು ಕಾಣುತ್ತದೆ. ಶ್ರೀ ಬಸವಲಿಂಗಪ್ಪನವರು ಅಂದಿನ ಶ್ರೀ ಜತ್ತಿಯವರ ಮಂತ್ರಿಮಂಡಲದಲ್ಲಿ ಡೆಪ್ಯೂಟಿ ಹೋಂ ಮಿನಿಸ್ಟರ್ ಆಗಿದ್ದರು. ಆ ಕಾಲಕ್ಕೆ ಹುಬ್ಬಳಿಯಲ್ಲಿ ಮೊದಲ ಬಾರಿಗೆ ನನ್ನ ಮತ್ತು ಕೆ.ಹೆಚ್. ಪಾಟೀಲರ ಸಂಪರ್ಕವಾಯಿತು ಅಂದಿನಿಂದ ಇಲ್ಲಿಯವರೆಗೆ ನಮ್ಮ ವೈಯಕ್ತಿಕ ಸ್ನೇಹಕ್ಕೆ ಯಾವ ಚ್ಯುತಿಯೂ ಬಂದಿರಲಿಲ್ಲ. ದಿವಂಗತ ಪಾಟೀಲರು ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು ಎಂದು ತಮ್ಮ ಮಾತಿನಲ್ಲಿ ಸ್ಪಷ್ಟವಾಗಿ ತಿಳಿಸಿದ್ದೀರಿ. ಇಂದು ನಮ್ಮ ಸಭೆ ಸ್ವಲ್ಪ ಬಡವಾಗಿದೆ ಅಂದರೆ ಅಂಥ ವ್ಯಕ್ತಿಗಳು ನಿಮ್ಮಿಂದ ದೂರ ಹೋದುದರಿಂದ ಬಡವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದೆಂದು ನಾನು ಭಾವಿಸುತ್ತೇನೆ.

ನಾವು ಈ ಸಭೆಯಲ್ಲಿ ಶಕ್ತಿಯುತರಾದ ಸದಸ್ಯರನ್ನು ಕಳೆದುಕೊಳ್ಳುತ್ತಿದ್ದೇವೆ. 1991ರ ನವೆಂಬರ್‌ನಲ್ಲಿ ಇನ್ನೊಬ್ಬ ಸದಸ್ಯ ಶ್ರೀ ಲಕ್ಕಪ್ಪನವರನ್ನು ಕಳೆದುಕೊಂಡಿದ್ದೇವೆ. ಅವರು ಹೋರಾಟಗಾರರಾಗಿ ಸಭೆಯ ಕಾರ್ಯಕಲಾಪಗಳಲ್ಲಿ ಈ ಸಾರಿ ಅಷ್ಟು ಸಕ್ರಿಯವಾಗಿ ಭಾಗವಹಿಸಲಾಗದಿದ್ದರೂ 1962ರಿಂದ 1967 ರವರೆಗೆ ನಂತರ ಲೋಕಸಭೆಯಲ್ಲಿ 1967ರಿಂದ ಹೇಗೆ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದರು ಎಂಬುದು ಬಹುಶಃ ಎಲ್ಲರಿಗೂ ಗೊತ್ತಿದೆ. ಅದಕ್ಕೂ ಹೆಚ್ಚಾಗಿ ತಾವು ನಂಬಿರತಕ್ಕ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಯಾವ ಹಂಗೂ ಇಲ್ಲದೆ ಕಾರ್ಯ ಮಾಡುತ್ತಿದ್ದ ಪಾಟೀಲರು ಇಂದು ನಮ್ಮಿಂದ ದೂರವಾಗಿದ್ದಾರೆ. ಅದು ಸಂಸದೀಯ ವಿಷಯ ಆಗಬಹುದು ಅಥವಾ ಆಡಳಿತದ ವಿಷಯ ಆಗಬಹುದು ಅವರಿಗೆ ಏನು ನಂಬಿಕೆ ಇತ್ತು ಅದನ್ನು ಪ್ರತಿಪಾದಿಸುವುದರಲ್ಲಿ ಯಾರ ಹಂಗಿಗೂ ಒಳಗಾಗದೆ ಪ್ರತಿಪಾದನೆ ಮಾಡುತ್ತಿದ್ದರು. ಅವರ ಕ್ಷೇತ್ರ ಅಂದರೆ ಸಹಕಾರ ಕ್ಷೇತ್ರ ಅವರು ಸಹಕಾರ ಕ್ಷೇತ್ರದಲ್ಲಿ ಹೆಚ್ಚಾಗಿ ಕೆಲಸ ಮಾಡುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ತಮ್ಮ ಕಾರ್ಯ ಕ್ಷೇತ್ರಕ್ಕೆ ತಮ್ಮ ಊರನ್ನು ಆರಿಸಿಕೊಂಡು ಅದನ್ನು ಕರ್ನಾಟಕ ಭೂಪಟದಲ್ಲಿ ಒಂದು ಗಣನೀಯವಾದ ಊರನ್ನಾಗಿ ಮಾಡಿದ್ದಾರೆ. ಇವತ್ತು ಅವರು ನಮ್ಮನ್ನಗಲಿದ್ದರೂ ಅವರ ಕಾರ್ಯ ಮುಂದಿದೆ. ನಮ್ಮಿಂದ ದೂರ ಹೋದರೂ ಕೆಲವು ವಿಚಾರಗಳನ್ನು ಅವರು ಏನು ಪ್ರಸ್ತಾಪ ಮಾಡುತ್ತಿದ್ದರು ಅದನ್ನು ಮನಸ್ಸಿನಲ್ಲಿಟ್ಟುಕೊಂಡರೆ ಅದಕ್ಕೆ ಮಾನ್ಯತೆ ಕೊಟ್ಟರೆ ಅವರಿಗೆ ಹೆಚ್ಚು ಗೌರವ ಕೊಟ್ಟಂತಾಗುತ್ತದೆಂದು ಪ್ರಸ್ತಾಪ ಮಾಡುತಾ ಇವತ್ತು ಅವರು ನಮ್ಮನ್ನಗಲಿದ್ದರೂ ಕೂಡ ಅವರ ಮಗ ನಮ್ಮ ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿದ್ದಾರೆ. ಆ ವ್ಯಕ್ತಿ ಕೂಡ ಅಷ್ಟೇ ವಿಚಾರವಂತ ವ್ಯಕ್ತ ಹಾಗು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರತಕ್ಕ ವ್ಯಕ್ತಿ ತಮ್ಮ ರಾಜ್ಯದ ವಿಧಾನ ಪರಿಷತ್ತಿನಲ್ಲಿ

ಬಿಟ್ಟುಹೋಗಿದ್ದಾರೆ ಇದು ಸಂತೋಷದ ವಿಚಾರ. ಇದು ಹೆಚ್ಚು ಮಾತನಾಡದೇ ಅವರು ಆಡಳಿತದ ಬಗ್ಗೆ ರಾಜ್ಯದ ರಾಜಕಾರಣದ ಬಗ್ಗೆ ರಾಜ್ಯದ ಹೆಚ್ಚು ಆಸಕ್ತಿ ಇದ್ದಂಥ ರಾಜಕೀಯದ ಬಗ್ಗೆ ಅಷ್ಟೇ ಅಲ್ಲ ರಾಷ್ಟ್ರದ ರಾಜಕೀಯದ ಬಗ್ಗೆ ಕೂಡ ಒಬ್ಬ ವ್ಯಕ್ತಿ. ರಾಜ್ಯದ ರಾಜಕಾರಣ ದಾರಿ ತಪ್ಪುವಾಗ ಅಥವಾ ದಾರಿ ತಪ್ಪುತ್ತದೆ ಎಂದು ಸಂಶಯ ಬಂದಾಗ ನೇರ ಮಾತಿನಿಂದ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನಪಟ್ಟಂಥ ಒಬ್ಬ ವ್ಯಕ್ತಿ.

ಅವರ ನುಡಿ ಆ ದಿಸೆಯಲ್ಲಿ ನಮಗೆ ಸ್ವಲ್ಪ ಮಾರ್ಗದರ್ಶನವಾಗತಕ್ಕ ನುಡಿ ಎಂಬ ಮಾತನ್ನು ಹೇಳಿ ಇವತ್ತು ಅವರು ಏನು ನಮ್ಮಿಂದ ದೂರ ಹೋಗಿದ್ದಾರೆ ಅವರ ಆತ್ಮಕ್ಕೆ ಶಾಂತಿ ಕೋರುತ್ತಾ ಅವರ ಮನೆಯವರಿಗೆ ಅವರ ನಿಧನದಿಂದಾದ ದುಃಖವನ್ನು ಸಹಿಸತಕ್ಕ ಶಕ್ತಿಯನ್ನು ದೇವರು ದಯಪಾಲಿಸಲಿ ಎನ್ನು ಮಾತನ್ನು ಹೇಳಿ ಇವತ್ತು ತಾವು ಏನು ಈ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ನನ್ನ ಅನುಮೋದನೆ ಕೊಡುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ. ಜೈಹಿಂದ್.

ಡಾ|| ಜೀವರಾಜ್ ಆಳ್ವ (ಜಯಮಹಲ್): ಮಾನ್ಯ ಅಧ್ಯಕ್ಷರೆ ಕಳೆದ 20 ವರ್ಷಗಳ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ತೀಕ್ಷ್ಣವಾದ ವಿರೋಧಾಭಿಪ್ರಾಯ ಇದ್ದರೂ ಕೂಡ ಪೂರ್ಣವಾಗಿ ಮನಸ್ಸಿಗೆ ಒಪ್ಪಿಗೆಯಾದಂಥ ಕಾಂಗ್ರೆಸ್ ನಾಯಕರಲ್ಲಿ ಶ್ರೀ ಕೆ.ಹೆಚ್. ಪಾಟೀಲರು ಅಗ್ರಗಣ್ಯರು. ಬಹಳ ವರ್ಣರಂಜಿತ ವ್ಯಕ್ತಿತ್ವ ಅವರದು. ಆಮೇಲೆ ಪೊಲಿಟಿಕಲ್ ಗ್ರಿಟ್ ಪೊಲಿಟಿಕಲ್ ಡಿಟರ್‌ಮಿನೇಷನ್ ಎನ್ನುತ್ತಾರೆ. ನಾವೆಲ್ಲರೂ ಯುವಕರಾಗಿದ್ದಾಗ ವಿಧ್ಯಾರ್ಥಿಗಳಾಗಿದ್ದಾಗ ನಾವು ಕೇಳಿಬಂದಂಥ ವಿಚಾರ. ರೆಡ್ಡಿ ಕಾಂಗ್ರೆಸ್‌ಗೆ ಚುನಾವಣೆಗೆ ಅಭ್ಯರ್ಥಿಗಳನ್ನು ನಿಲ್ಲಿಸಬೇಕಾದರೆ ಅವರ ಸ್ವಂತ ಆಸ್ತಿಯನ್ನು ಮಾರಿ, ವಿಶಾಲ ಕರ್ನಾಟಕ ಮುದ್ರಣಾಲಯವನ್ನು ಬ್ಯಾಂಕಿಗೆ 35 ಲಕ್ಷ ರೂಪಾಯಿಗೆ ಅಡಮಾನ ಇಟ್ಟು ಅದರಿಂದ ಚುನಾವಣೆ ನಡೆಸಿದಂಥ ಶ್ರೇಷ್ಠ ವ್ಯಕ್ತಿತ್ವ ಶ್ರೀ ಕೆ.ಹೆಚ್. ಪಾಟೀಲರದು.

ಒಂದು ಕಡೆ ಈ ಸದನ ಬಡವಾಗಿದೆ ಎಂದು ಶ್ರೀ ರಂಗನಾಥ್ ಅವರು ಹೇಳಿದ್ದಾರೆ. ಕೆಚ್ಚು ಎಂದು ಏನು ಹೇಳುತ್ತೇವೆ ಪೊಲಿಟಿಕಲ್ ಡಿಟರ್‌ಮಿನೇಷನ್ ಪೊಲಿಟಿಕಲ್ ವಿಲ್ ಪವರ್ ನಮ್ಮ ನಾಯಕರಲ್ಲಿ ಬಹಳ ಕಡಿಮೆಯಾಗಿದೆ. ಅಂಥ ಒಂದು ಶ್ರೇಷ್ಠ ವ್ಯಕ್ತಿತ್ವವನ್ನು ಹೊಂದಿದ್ದಂಥ ಕೆ.ಹೆಚ್. ಪಾಟೀಲರ ಬಗ್ಗೆ ನಮ್ಮ ಸಿಂಧ್ಯಾ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ವಾಟಾಳ್ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಒಂದು ಮಾತನ್ನು ಹೇಳಲಿಕ್ಕೆ ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಸಹಕಾರ ಕ್ಷೇತ್ರ ಮತ್ತು ಗ್ರಾಮೀಣ ಅಭಿವೃದ್ಧಿಗೆ ಕೆ.ಎಚ್. ಪಾಟೀಲರು ಮಾಡಿರುವ ಸೇವೆ ಅಸದಳ. ಆ ಸೇವೆಯನ್ನು ನೆನೆಸಿಕೊಳ್ಳಬೇಕಾದರೆ ಒಂದು ದೊಡ್ಡ ಸಂಸ್ಥೆಯನ್ನು ಹುಲಕೋಟಿಯಲ್ಲಿ ಆರಂಭ ಮಾಡಬೇಕಾಗುತ್ತದೆ. ಏಕೆಂದರೆ ನಮ್ಮಲ್ಲಿ ಒಂದು ಪರಿಹಾರ ಏನು ಬಂದಿದೆಯೆಂದರೆ ಇದ್ದ ಕಟ್ಟಡಗಳಿಗೆ ದೊಡ್ಡ ವ್ಯಕ್ತಿಗಳ ಹೆಸರುಗಳನ್ನು ಇಡುವುದು ಭಾವಚಿತ್ರಗಳನ್ನು ಹಾಕುವುದು ಆಗುತ್ತಿದೆ. ಇದೆಲ್ಲಾ ರೋಡ್‌ಗಳಿಗೆ ಕಟ್ಟಡಗಳಿಗೆ ಆಗಲಿ ನಿಜವಾಗಿ ನಮ್ಮ ವಿಧಾನಸಭಾ ಸದಸ್ಯರ, ನಮ್ಮ ಕರ್ನಾಟಕದ ಸಮಸ್ತ ಜನತೆಯ ಒಂದು ಕೊಡುಗೆ ಹುಲಕೋಟಿಯ ಹುಲಿಗೆ ಕೊಡಬೇಕಾದರೆ ಆ ಹುಲಕೋಟಿಯಲ್ಲಿ ಒಂದು ರಾಷ್ಟ್ರೀಯ ಮಟ್ಟದ ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿಯ ಸಂಸ್ಥೆಯನ್ನು ತೆರೆಸಬೇಕು. ಅದರಲ್ಲಿ ಭಾರತ ಸರ್ಕಾರವನ್ನೂ ಸೇರಿಸಬೇಕು. ಏಕೆಂದರೆ it must not be a small time project. ಹಿಂದೆ ಶ್ರೀ ದೇವರಾಜ ಅರಸರ ಬಗ್ಗೆ ಡೆವಲಪ್‌ಮೆಂಟ್

ಇನ್ಸ್‌ಟಿಟ್ಯೂಟ್ ಮಾಡುತ್ತೇವೆಂದು ನಾವು ಒಂದು ತೀರ್ಮಾನ ತೆಗೆದುಕೊಂಡೆವು ಆದರೆ ಅದು ಆಗಲಿಲ್ಲ ಅಂದರೆ ನಮ್ಮ ತಪ್ಪುಗಳನ್ನು ನಾನು ನೆನೆಸಿಕೊಂಡು ಕೂಡ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಒಂದು ದೊಡ್ಡ ಸಂಸ್ಥೆಯನ್ನು ಅತ್ಯಂತ ದೊಡ್ಡ ಸಂಸ್ಥೆಯನ್ನು ಮಾಡಿ ಅದಕ್ಕೆ ವಿಶ್ವಬ್ಯಾಂಕಿನ ಸಹಾಯವನ್ನಾಗಲಿ ಅಥವಾ ಭಾರತ ಸರ್ಕಾರದ ಸಹಾಯವನ್ನಾಗಲಿ ತೆಗೆದುಕೊಂಡು ಅತ್ಯಂತ ದೊಡ್ಡ ಸಂಸ್ಥೆಯನ್ನು ಮಾಡುವಲ್ಲಿ ತಾವು ಸರ್ಕಾರಕ್ಕೆ ಸಲಹೆ ಕೊಡಬೇಕು ಅದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಬೇಕು ಎಂದು ಹೇಳಿ ಕೆ.ಎಚ್. ಪಾಟೀಲರ ನಿಧನಕ್ಕೆ ಸಂತಾಪ ವ್ಯಕ್ತ ಮಾಡುತ್ತಾ ಮಿತ್ರರಾದ ಬಾಬಾಸಹೇಬ್ ರಾವ್ ಸಾಹೇಬ್ ಮಹಾಗಂವ್‌ಕರ್ ಅವರ ನಿಧನಕ್ಕೂ ಸಂತಾಪ ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನ

\+ ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು): ಸನ್ಮಾನ್ಯ ಅಧ್ಯಕ್ಷರೆ, ದಿವಂಗತ ಕೆ.ಎಚ್. ಪಾಟೀಲರ ಬಗ್ಗೆ ತಾವು ಮಂಡಿಸಿರುವ ಸಂತಾಪ ಸೂಚನೆ ಅನುಮೋದನೆ ನೀಡುತ್ತಾ ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಶ್ರೀಮಾನ್ ಕೆ.ಎಚ್. ಪಾಟೀಲರ ನೆರಳಿನಲ್ಲಿ ಕಳೆದ ಸುಮಾರು 25-26 ವರ್ಷಗಳ ಕಾಲ ಬಂದಂಥ ವ್ಯಕ್ತಿ ನಾನು.

ಅವರು ಬಾಲ್ಯದಿಂದಲೂ ಹೋರಾಟಮಯವಾದ ಒಂದು ಜೀವನವನ್ನು ಕಲಿತುಕೊಂಡು ಬಂದ ವ್ಯಕ್ತಿ ನಾನು ತಿಳಿದುಕೊಂಡ ಹಾಗೆ ವಿದ್ಯಾರ್ಥಿಜೀವನದಲ್ಲೂ ಕೂಡ ಆ ಕ್ಷೇತ್ರದಲ್ಲಿಯೇ ಹೋರಾಟ ಮಾಡಿರತಕ್ಕ ವ್ಯಕ್ತಿ ತಮ್ಮ ಗುರಿ ಸಾಧಿಸುವುದಕ್ಕೋಸ್ಕರ ತಮ್ಮನ್ನೇ ತಾವು ಅರ್ಪಣೆ ಮಾಡಿದಂತಹ ವ್ಯಕ್ತಿ ಬಾಲ್ಯ ಜೀವನದಲ್ಲಿಯೇ ಅದನ್ನು ಮೊಳಕೆಯಾಗಿ ತೋರಿಸಿಕೊಡುತ್ತಿದ್ದರು ಎಂದು ಹಿರಿಯರು ಹೇಳುತ್ತಿದ್ದರು. ಅವರು ಹೆಚ್ಚು ಓದುವುದಕ್ಕೆ ಆಗಲಿಲ್ಲ. ಎಸ್.ಎಸ್.ಎಲ್.ಸಿ. ಫೇಲ್ ಆಗಿ ವಿದ್ಯ ಕಲಿಯುವುದನ್ನು ಬಿಟ್ಟರು. ಮುಂದೆ ರಾಜಕೀಯ ಜೀವನದಲ್ಲಿ ಕಾಲಿಟ್ಟರು. ಅವರ ತಂದೆ ರಂಗನಗೌಡರು ಕರ್ನಾಟಕದಲ್ಲಿಯೇ ಪ್ರಪ್ರಥಮವಾಗಿ ಸಹಕಾರಿ ಸಂಘವನ್ನು ಹುಲಕೋಟೆಯಲ್ಲಿ ಪ್ರಾರಂಭ ಮಾಡಿದವರು. ಅಲ್ಲಿಂದ ಆ ಸಹಕಾರಿ ಕ್ಷೇತ್ರದ ಬೀಜ ಇವರಲ್ಲಿ ಊರಿತು ಎಂದರೆ ತಪ್ಪಾಗಲಾರದು. ಇವರು ಗ್ರಾಮೀಣ ಮಟ್ಟದಿಂದ ಹಿಡಿದು ರಾಜ್ಯ,ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದವರೆಗೆ ನಾಯಕರಾಗತಕ್ಕ ಶಕ್ತಿ ಬೆಳೆದಿದ್ದು ಅದು ಗ್ರಾಮೀಣ ಮಟ್ಟದಿಂದ ಪ್ರಾರಂಭ ಮಾಡಿದ್ದು. ಮೊಟ್ಟಮೊದಲನೇಯದಾಗಿ ಅವರ ಹುಲಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಸಹಕಾರಿ ಸಂಘದ ಅ ತಾಲ್ಲೂಕು ಸೇಲ್ಸ್ ಸೊಸೈಟಿಯ ಅಧ್ಯಕ್ಷರಾಗಿ ಜಿಲ್ಲಾ ಮಟ್ಟದ ಸಂಘಸಂಸ್ಥೆ ಅಧ್ಯಕ್ಷರಾಗಿ ರಾಜ್ಯಮಟ್ಟಕ್ಕೆ ರಾಷ್ಟ್ರಮಟ್ಟಕ್ಕೆ ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿದ ಒಬ್ಬ ಧೀಮಂತ ವ್ಯಕ್ತಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. 25 ವರ್ಷಗಳ ಕಾಲ ಅವರ ನೆರಳಿನಲ್ಲೇ ಬಂದು ನಾನು ಅವರ ಸ್ವಭಾವದ ಪ್ರತಿಯೊಂದು ಇಂಚನ್ನೂ ಅರಿತಿದ್ದೇನೆ ಅವರು ತತ್ವಕ್ಕಾಗಿ ಅವರ ಗುರಿ ಸಾಧನೆಗಾಗಿ ಎಂತಹ ವ್ಯಕ್ತಿಗಳೇ ಅಡ್ಡ ಬಂದರೂ ಕೂಡ ಅವರನ್ನು ಎದುರಿಸತಕ್ಕ ಒಂದು ಹೃದಯ ಅವರದ್ದಾಗಿತ್ತು. ಮೊಟ್ಟಮೊದಲನೆಯದಾಗಿ ಅನೇಕ ರಾಜಕೀಯ ವ್ಯಕ್ತಿಗಳ ಎದುರಿಸತಕ್ಕ ಒಂದು ವ್ಯಕ್ತಿತ್ವವನ್ನು ಪಡೆದುಕೊಂಡಿದ್ದರು. ಉದಾಹರಣೆ ಹೇಳುವುದಾದರೆ ರಾಜಕೀಯದ ಪ್ರಾರಂಭದಲ್ಲಿ ಜಿಲ್ಲಾಮಟ್ಟದಲ್ಲಿ ಗುತ್ತಲಪ್ಪನವರನ್ನು ಎದುರಿಸತಕ್ಕ ನಿಜಲಿಂಗಪ್ಪನವರನ್ನು ಎಂದು ಜತ್ತಿಯವರನ್ನು ಶ್ರೀಮಾನ್ ದೇವರಾಜ್ ಅರಸ್ ಅವರನ್ನು ಎದುರಿಸತಕ್ಕ ಕೊನೆಗೆ ಶ್ರೀಮತಿ ಇಂದಿರಾಗಾಂಧಿಯವರಲ್ಲೂ ಕೂಡ ಭಿನ್ನಾಪ್ರಾಯ ಹೊಂ ಅವರನ್ನು ಎದುರಿಸತಕ್ಕ ಒಂದು ಗಂಡುಗಲಿ ಎದೆ ಅವರಲ್ಲಿ ಇತ್ತು. ನಂತರ ಅವರು ತಾವು ಮಾಡಿದ್ದು ಕೆಲವೊಮ್ಮೆ ಸರಿಯಲ್ಲವೆಂದು ತಿಳಿದು

ಅದನ್ನು ಒಪ್ಪಿಕೊಂಡು ಹೇಳತಕ್ಕ ವಿಶಾಲ ಹೃದಯವೂ ಕೂಡ ಅವರ ಇತ್ತೆಂದರೆ ತಪ್ಪಾಗಲಾರದು.

ಇತ್ತಿತ್ತಲಾಗಿ ಅವರು ನನ್ನ ಎದುರು ಈ ಜೀವನದಲ್ಲಿ ಅತ್ಯಂತ ಪ್ರಿಯವಾದ ನನಗೆ ವ್ಯಕ್ತಿಗಳು ಶ್ರೀಮತಿ ಇಂದಿರಾಗಾಂಧಿಯವರು ತದನಂತರ ನಿಜಲಿಂಗಪ್ಪನವರು ಎಂದು. ಅವರು ನಿಜಲಿಂಗಪ್ಪನವರ ಬಗ್ಗೆ ಹೇಳುತ್ತಾ ನಾನು ಬಹಳ ತಪ್ಪು ಮಾಡಿಕೊಂಡು ಅನೇಕ ಹಂತಗಳಲ್ಲಿ ಅವರನ್ನು ನಾನು ಎದುರಿಸುತಾ ಬಂದೆ ಎಂದರು. ಆದರೆ ಇವತ್ತು ಅವರನ್ನು ನೋಡಿದರೆ ಮಹಾ ನಾಯಕರು ರಾಷ್ಟ್ರದ ನಾಯಕರು ಎಂದೆನಿಸುತ್ತದೆಂದು ಅವರು ಅನೇಕ ಸಂದರ್ಭಗಳಲ್ಲಿ ನನಗೆ ಹೇಳುತ್ತಿದ್ದರು. ಇವತ್ತು ನಾನು ಮಾನ್ಯ ಕೆ.ಹೆಚ್. ಪಾಟೀಲರ ಬಗ್ಗೆ ಹೇಳುವುದೇನೆಂದರೆ ಅವರು ಸಹಕಾರಿ ಕ್ಷೇತ್ರದಲ್ಲಿ ನಮ್ಮನ್ನೆಲ್ಲಾ ತಯಾರು ಮಾಡಿದವರು ಅವರ ಗರಡಿ ಮನೆಯಲ್ಲಿ ತಯಾರಾದ ನಾವು ಸಹಕಾರಿ ಕ್ಷೇತ್ರಕ್ಕೆ ಯಾವರೀತಿ ಸೇವೆ ಸಲ್ಲಿಸಬೇಕೆಂದು ಅವರು ನಮಗೆ ಹೇಳುತ್ತಿದ್ದರು. ಇವತ್ತು ಭಾರತ ದೇಶ ಗ್ರಾಮೀಣ ದೇಶವಾಗಿರುವುದರಿಂದ ರೈತರು ಬೆಳೆದ ಮಾಲನ್ನು ಅಲ್ಲಿಯೇ ಸಂಸ್ಕರಣ ಮಾಡಿ ಅವರು ಬೆಳೆದ ಮಾಲಿಗೆ ಅತ್ಯುತ್ತಮ ಬೆಲೆಯನ್ನು ಕೊಡಿಸಿದಾಗ ಮಾತ್ರ ನಾವು ರೈತರ ಏಳಿಗೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ದೃಷ್ಟಿಯಿಂದ ಈ ಸಹಕಾರಿ ಕ್ಷೇತ್ರದಲ್ಲಿ ರೈತರಿಗೆ ಬೇಕಾದ ಎಲ್ಲಾ ಸಹಕಾರವನ್ನು ಕೊಡುವ ದೃಷ್ಟಿಯಿಂದ ಸಹಕಾರಿ ಕ್ಷೇತ್ರದಲ್ಲಿ ಸಂಸ್ಕರಣೆ ಮಾಡತಕ್ಕ ಫ್ಯಾಕ್ಟರಿಗಳನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಹುಲಕೋಟಿ ಗ್ರಾಮದಲ್ಲಿ ಇವತ್ತು ಮೂರು ನೂಲಿನ ಗಿರಣಿಗಳು ಇವೆ. ಎರಡು ಸಹಕಾರಿ ಕ್ಷೇತ್ರದಲ್ಲಿ ಇವೆ. ಇನ್ನೊಂದು ಪ್ರೈವೇಟ್ ಕಂಪನಿಯಾಗಿ ಬೆಳೆದು ನಿಂತಿದೆ. ಪಾಲಿಟೆಕ್ನಿಕ್ ಇಂಜಿನಿಯರಿಂಗ್ ಇದೆ. ಇಂಜಿನಿಯರಿಂಗ್ ಗ್ರಾಜುಯೇಟ್ ಕಾಲೇಜು ಇದೆ. ದನಗಳಿಗೆ ಹಿಂಡಿ ತಿನ್ನಿಸತಕ್ಕ ಕ್ಯಾಟಲ್‌ಫೀಡ್ ಸೊಸೈಟಿ ಇದೆ. ಅಲ್ಲಿ ನೋಡಿಬಿಟ್ಟರೆ ಇಡೀ ಸಹಕಾರಿ ಕ್ಷೇತ್ರದಿಂದ ರೈತನಿಗೆ ಯಾವ ರೀತಿಯಾದ ಉಪಯೋಗ ಮಾಡಬಹುದೊ ಆ ಎಲ್ಲ ಸಂಸ್ಥೆಗಳನ್ನು ಸ್ಥಾಪನೆ ಮಾಡಿದ್ದಾರೆ. ವಿಧ್ಯಾಕ್ಷೇತ್ರದಲ್ಲ ಮಹತ್ತರವಾದ ಆಸೆಯನ್ನಿಟ್ಟುಕೊಂಡಿದ್ದರು. ಮೆಡಿಕಲ್ ಕಾಲೇಜನ್ನು ಬಿಂಕನಕಟ್ಟೆಗುಡ್ಡದಲ್ಲಿ ಪ್ರಾರಂಭ ಮಾಡಬೇಕೆಂಬ ಮಹತ್ತರವಾದ ಆಸೆಯನ್ನು ಇಟ್ಟುಕೊಂಡಿದ್ದರು ಅದು ಸಾಧ್ಯವಾಗಲಿಲ್ಲ ಇವತ್ತು ಸಹಕಾರಿ ಕ್ಷೇತ್ರದಲ್ಲಿ ಶ್ರೀಮಾನ್ ಕೆ.ಹೆಚ್. ಪಾಟೀಲ್‌ಜಿಯವರಿಗೆ ಇದ್ದಂತಹ ಅಪಾರವಾದ ಜ್ಞಾನ ಬಹುತೇಕ ನಮ್ಮ ಕಾಲದಲ್ಲಿ ನಮ್ಮ ರಾಜ್ಯದಲ್ಲಿ ಬೇರೆ ಯಾರಿಗೂ ಇರಲಿಕ್ಕಿಲ್ಲ ಪ್ರತಿಯೊಂದನ್ನು ಸಹಕಾರದ ಮುಖಾಂತರವೇ ಬೆಳಕಿಗೆ ತರಬೇಕು ರೈತರಿಗೆ ಉಪಕಾರ ಮಾಡಬೇಕು ಎನ್ನತಕ್ಕ ಒಂದು ಮೂಲ ಧ್ಯೇಯವನ್ನಿಟ್ಟುಕೊಂಡು ಸಹಕಾರಿ ಕ್ಷೇತ್ರದಲ್ಲಿ ಮೂಲ ತತ್ವಗಳನ್ನು ಅವರು ಅಳವಡಿಸಿಕೊಂಡಿದ್ದರು.

ಅದೇನೆಂದರೆ ಸಹಕಾರಿ ಕ್ಷೇತ್ರ ರಾಜಕೀಯದ ಹಿಡಿತದಿಂದ ಬಹುದೂರ ಇರಬೇಕೆನ್ನುವುದು ಅವರ ಮೂಲ ತತ್ವ ನಂತರ ಸಹಕಾರ ಸಂಘಗಳನ್ನು ಖಾಸಗೀಕರಣ ಗೊಳಿಸಬಾರದು ಎನ್ನುವುದು ಮೂಲತಃ ಅವರದು ಹಠ ಸಹಕಾರ ಕ್ಷೇತ್ರದಲ್ಲಿ ಸರ್ಕಾರ ನಾಮಿನೇಷನ್ ಮಾಡಬಾರದು ಖಾಸಗೀಕರಣಗೊಳಿಸಬಾರದು, ಸರ್ಕಾರದ ಹಿಡಿತದಿಂದ ಬಹುದೂರ ಇರಬೇಕು ಎನ್ನುವ ಮೂಲ ತತ್ವವನ್ನು ಬೆಳೆಸಿಕೊಂಡು ಬಂದಂಥಹ ವ್ಯಕ್ತಿ ಅವರು. ಅಂತಹ ವ್ಯಕ್ತಿಯನ್ನು ನಾವು ಅಗಲಿದ್ದೇವೆ. ಅವರ ಅಗಲಿಕೆ ನಮಗಷ್ಟೆ ಅಲ್ಲ ಈ ರಾಜ್ಯಕ್ಕೆ ರಾಷ್ಟ್ರಕ್ಕೆ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಒಂದು ದೊಡ್ಡ ಹಾನಿಯಾಗಿದೆ ಅಂದರೆ ತಪ್ಪಾಗಲಾರದು ಕೆ.ಹೆಚ್. ಪಾಟೀಲ್‌ರವರು ರಾಜ್ಯಮಟ್ಟದ ಸಂಸ್ಥೆಗಳಲ್ಲಿ ಮಾತ್ರ ಅಧ್ಯಕ್ಷರಾಗಿರಲಿಲ್ಲ ಕರ್ನಾಟಕ

ರಾಜ್ಯ ಸ್ಪಿನಿಂಗ್ ಮಿಲ್ಸ್ ಫೆಟರೇಶನ್‌ನ ಅಧ್ಯಕ್ಷರಾಗಿದ್ದರು ಅಷ್ಟೇ ಅಲ್ಲ ಇಂಟರ್‌ನ್ಯಾಷನಲ್ ಕೋ-ಆಪರೇಟೀವ್ ಅಲೈಯೆನ್ಸ್ ಎಂದು ಏಷಿಯಾ ಖಂಡದಲ್ಲಿ ಏನೊಂದು ಅಲೈಯನ್ಸ್ ಇತ್ತು ಅದರ ಅಧ್ಯಕ್ಷರಾಗಿ ಅವರ ಅಂತ್ಯ ಕಾಲದವರೆಗೂ ಅಂತರ ರಾಷ್ಟ್ರೀಯ ಮಟ್ಟದ ಒಂದು ಸಂಸ್ಥೆಯ ಅದ್ಯಕ್ಷರಾಗಿ ಕೆಲಸ ಮಾಡುತ್ತಿದ್ದಂತಹವರನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ನಾವು ನಿಜವಾಗಿಯೂ ಬಡವರಾಗಿದ್ದೇವೆ. ನಾನಂತೂ ಆರ್ಫನ್ ಆಗಿದ್ದೇನೆ. ಅಂದರೆ ತಂದೆ ತಾಯಿಗಳನ್ನು ಕಳೆದುಕೊಂಡಂತಹ ವ್ಯಕ್ತಿಯಾಗಿದ್ದೇನೆಂದರೆ ತಪ್ಪಾಗಲಿಕ್ಕಿಲ್ಲ. ನನಗೆ ಜೀವ ಕೊಟ್ಟಂತಹ ತಂದೆಯನ್ನು ಕಳೆದುಕೊಂಡಾಗ ಎಷ್ಟು ದುಃಖವಾಗಬಹುದೋ ಅದಕ್ಕಿಂತಲೂ ಹೆಚ್ಚಾಗಿ ನನ್ನ ರಾಜಕೀಯ ತಂದೆಯನ್ನು ಕಳೆದುಕೊಂಡು ಬಹಳ ದುಃಖವಾಗಿದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಅವರ ಪಕ್ಷದ ಬಗ್ಗೆ ಹೇಳುವುದಾದರೆ ಅವರು ಹುಟ್ಟು ಕಾಂಗ್ರೆಸ್ಸಿಗರು ಅಪ್ಪಟ ಕಾಂಗ್ರೆಸ್ಸಿಗರು ಅಂದರೆ ತಪ್ಪಾಗಲಾರದು ನಾನು 1969ರಿಂದ ಅವರ ಜೊತೆಯಲ್ಲಿದ್ದೇನೆ.

ನಾನು ಆಗ ತಾನೇ ಕಾಲೇಜಿನಿಂದ ಹೊರಗೆ ಬಂದಾಗ ಕಾಂಗ್ರೆಸ್ಸಿಗೆ ಸೇರಬೇಕೆಂದಾಗ ಅವರು ನನ್ನನ್ನು ಕೇಳಿದರು ನೀನು ಇನ್ನು ಬಹಳ ಸಣ್ಣವಇದ್ದಿ ನಿನಗೆ ಇನ್ನು 25ವರ್ಷ ನಿಮ್ಮ ತಾಲ್ಲೂಕಿನಲ್ಲಿ ಮತ್ತು ನಿಮ್ಮ ಬಂದೂಬಾಂಧವರೆಲ್ಲರೂ ಕಾಂಗ್ರೆಸ್ಸಿನ ವಿರೋಧಿಗಳಾಗಿ ನೀನು ಯಾವರೀತಿಯಾಗಿ ಕಾಂಗ್ರೆಸ್ಸಿಗೆ ಬರುತ್ತೀಯಾ ಎಂದು ಕೇಳಿದಾಗ ನಾ ಹೇಳಿದೆ ನಿಮ್ಮ ತತ್ವಗಳನ್ನು ಮೆಚ್ಚಿ ಬಂದಿದ್ದೇನೆ. ಏನೇ ಕಷ್ಟಬಂದರು ಎದುರಿಸುವುದಕ್ಕೆ ಸಿದ್ಧನಾಗಿದ್ದೇನೆಂದು ಹೇಳಿದ ಮೇಲೆ ನನ್ನನ್ನು ಟೆಸ್ಟ್ ಮಾಡಿ ಕಾಂಗ್ರೆಸ್ಸಿಗೆ ಕರೆದುಕೊಂಡರು. ಅವರು ಅವತ್ತಿನಿಂದ ಇವತ್ತಿವರೆಗೂ ಅಪ್ಪಟ ಕಾಂಗ್ರೆಸ್ಸಿಗರಾಗಿದ್ದರು. ಎಷ್ಟೇ ಭಿನ್ನಾಭಿಪ್ರಾಯಗಳು ಬಂದರೂ ಸಹಿತ ಅವರ ಒಂದೊಂದು ಹನಿ ಹನಿ ರಕ್ತವೂ ಸಹ ಕಾಂಗ್ರೆಸ್ಸಿನದಾಗಿತ್ತೆಂದರೆ ತಪ್ಪಾಗಲಾರದು. ಕಾಂಗ್ರೆಸ್‌ನ ಆರ್ಗನೈಸೇಷನ್ ದೃಷ್ಟಿಯಿಂದ ನಾಲ್ಕು ಅಣೆ ಒಂದು ರೂಪಾಯಿ ಸದಸ್ಯತ್ವ ಶುಲ್ಕವನ್ನು ಬಿಟ್ಟಿದ್ದೆ ಇಲ್ಲ ಕಾಂಗ್ರೆಸ್ ಸದಸ್ಯರುಗಳನ್ನಾಗಿ ಮಾಡುತ್ತಿದ್ದರು ಸಂಸ್ಥೆಯನ್ನು ಬೆಳಸುತ್ತಿದ್ದರು. ಸರ್ಕಾರಕ್ಕಿಂತ ಸಂಸ್ಥೆಗೆ ಬಹಳ ಮಹತ್ವ ಕೊಟ್ಟು ಬೆಳಸುತ್ತಿದ್ದರು ಎಂದು ಹೇಳುತ್ತಾ ಅವರಿಗೆ ಎರಡು ಮೂರು ಆಸೆಗಳಿದ್ದವು ಅವರ ಆಸೆಗಳನ್ನು ಈಡೇರಿಸಬೇಕೆಂದು ನಾನು ಬಹಳ ಕಳಕಳಿಯಿಂದ ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಗದಗ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾಡಬೇಕೆಂದು ಹೇಳುತ್ತಿದ್ದರು. ಅದೇರೀತಿಯಲ್ಲಿ ಅವರು ಸಾಯುವುದರೊಳಗೆ ಗದಗ ನಗರಕ್ಕೆ ಕುಡಿಯುವ ನೀರನ್ನು ತುಂಗಭದ್ರಾ ನದಿಯಿಂದ ತರಬೇಕೆನ್ನುವ ಆಸೆಯಿತ್ತು. ಮೂರನೆಯದಾಗಿ ಗದಗದ ಹತ್ತಿರ ಬಿಂಕನಕಟ್ಟೆಗುಡ್ಡದಲ್ಲಿ ಒಂದು ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಬೇಕೆಂದೂ ನಾನು ಜೀವಂತ ಇರುವುದರೊಳಗೆ ಈ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತಿದ್ದರು. ಅವರ ಈ ಮೂರು ಆಸೆಗಳನ್ನು ಈಡೇರಿಸುವುದಕ್ಕೆ ಸಕ್ರಿಯ ಬೆಂಬಲವನ್ನು ಮುಖ್ಯಮಂತ್ರಿಗಳು ಕೊಡುತ್ತಾರೆಂದು ನಾನು ಆಶಿಸಿ ನಾವು ಇಂತಹ ಮಹಾನ್ ನಾಯಕನನ್ನು ಕಳೆದುಕೊಂಡು ಬಡವಾಗಿದ್ದೇವೆ ಆಷ್ಟೇ ಅಲ್ಲ ಧಾರವಾಡ ಜಿಲ್ಲೆ ಏತಕ್ಕೆ ಇಡೀ ಭರತಖಂಡ ಇಂತಹ ಮಹಾನ್ ನಾಯಕನನ್ನು ಕಳೆದುಕೊಂಡು ಬಡವಾಗಿದೆ ಎಂಬ ಮಾತನ್ನು ಹೇಳಿ ಅವರು ಇವತ್ತು ನಮ್ಮನ್ನು ಅಗಲಿದ್ದರೂ ಸಹಿತ ಅವರ ಆತ್ಮ ಅಮರವಾಗಿದೆ. ಅವರ ಆತ್ಮ ಪರಮಾತ್ಮನಲ್ಲಿ ಸದಾ ಕಾಲವೂ ಚಿರಶಾಂತಿಯಿಂದ ಇರಲಿ ಎಂದು ಪರಮಾತ್ಮನಲ್ಲಿ ಬೇಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಇನ್ನೂ ಬಹಳ ಜನ ಮಾನ್ಯ ಸದಸ್ಯರು ಅದರಲ್ಲೂ ಧಾರವಾಡ ಜಿಲ್ಲೆಯವರು ಮಾತನಾಡಬೇಕೆಂದು ಬಯಸಿದ್ದಾರೆ. ಆದ್ದರಿಂದ ಎರಡೆರಡು ನಿಮಿಷ ಅವಕಾಶ ಕೊಡುತ್ತೇನೆ ಹೇಳಬೇಕಾಗಿರತಕ್ಕಂಥ ವಿಚಾರಗಳನ್ನು ಕೂಡ ಹೇಳಿದ್ದಾರೆ. ಈಗ ಶ್ರೀ ಬಸವರಾಜ ರಾಯರೆಡ್ಡಿಯವರು.....

+ ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ): ಸನ್ಮಾನ್ಯ ಅಧ್ಯಕ್ಷರೇ ಅತ್ಯಂತ ಹಿರಿಯರಾದಂಥ ಮತ್ತು ನಮ್ಮ ರಾಜ್ಯದಲ್ಲಿ ಸಚಿವರಾಗಿದ್ದಂಥ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಇವತ್ತಿನ ದಿವಸ ಈ ಸದನದಲ್ಲಿ ಇಲ್ಲ. ಅವರು ಅಕಾಲಿಕ ಮರಣಕ್ಕೆ ತುತ್ತಾಗಿದ್ದಾರೆ. ಶ್ರೀಯುತ ಪಾಟೀಲರ ಮರಣದಿಂದ ಆಗಿರುವ ನಷ್ಟ ಕೇವಲ ಅವರ ಕುಟುಂಬ ಮಾತ್ರ ಸೀಮಿತವಾಗಿಲ್ಲ ಈ ರಾಷ್ಟ್ರಕ್ಕೆ ಈ ರಾಜ್ಯದ ಸಹಕಾರಿರಂಗಕ್ಕೆ ಈ ರಾಜ್ಯದ ಕೃಷಿಕರಿಗೆ ಮತ್ತು ಈ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನತೆಗೆ ಕೂಡ ಅತ್ಯಂತ ಹೆಚ್ಚಿನ ನಷ್ಟವಾಗಿದೆ. ಶ್ರೀಯುತ ಪಾಟಿಲರನ್ನು ನಾನು ಇಪ್ಪತ್ತು ವರ್ಷಗಳಿಂದ ಬಲ್ಲೆ ಏಕೆಂದರೆ ನಾನು ರಾಯಚೂರು ಜಿಲ್ಲೆಯ ಎಲ್ಬುರ್ಗ ತಾಲ್ಲೂಕಿನಿಂದ ಬಂದಿದ್ದೇನೆ. ನನ್ನ ಕ್ಷೇತ್ರ ರಾಯಚೂರು ಜಿಲ್ಲೆಯ ಪಶ್ಚಿಮ ಭಾಗಕ್ಕಿದೆ. ಪಾಟೀಲರ ಕ್ಷೇತ್ರ ಗದಗ್ ಆಗಿದ್ದು ಅದು ರಾಯಚೂರಿನ ಪೂರ್ವಭಾಗಕ್ಕಿದೆ. ಹೀಗಾಗಿ ನನ್ನದು ಮತ್ತು ಅವರ ಕ್ಷೇತ್ರಗಳು ಅಕ್ಕ ಪಕ್ಕದ ಕ್ಷೇತ್ರಗಳು. ನಾನು ನನ್ನ ಕ್ಷೇತ್ರದ ಕೆಲವು ಹಳ್ಳಿಗಳಿಗೆ ಹೋದಾಗ ಪಕ್ಕದಲ್ಲಿರುವ ಅವರ ಕ್ಷೇತ್ರದ ಹಳ್ಳಿಗಳನ್ನೂ ನೋಡುತ್ತಿದ್ದೆ. ಅಲ್ಲಿಯ ಜನರ ಪಾಟೀಲರ ಬಗ್ಗೆ ಹೇಳುತ್ತಿದ್ದರು ಏನೆಂದರೆ ಇಲ್ಲಿ ಯಾವುದೇ ಚುನಾವಣೆ ನಡೆದರೂ ಅದು ಪಕ್ಷದ ಹೆಸರಲ್ಲಿ ನಡೆಯುತ್ತಿರಲಿಲ್ಲ ಎಂದು ಪಾಟೀಲರ ಕ್ಷೇತ್ರದಲ್ಲಿ ಅವರು ಎಷ್ಟು ಜನಪ್ರಿಯವಾಗಿದ್ದರು ಎಂದರೆ ಅವರಿಗೆ ಯಾವುದೇ ಪಕ್ಷ ಬೇಕಾಗಿರಲಿಲ್ಲ. ಅಲ್ಲಿ ಕೆ.ಹೆಚ್. ಪಾಟೀಲರು ಮತ್ತು ಇನ್ನಿತರರು ಎಂದು ಎರಡೇ ಎರಡು ಪಕ್ಷಗಳು ಇರುತ್ತಿದ್ದವು. ಪಾಟೀಲರು ಚುನಾವಣೆಗೆ ನಿಂತು ಕೊಂಡಿದ್ದಾರೆ ಎಂದರೆ ಅವರು ಆ ಕ್ಷೇತ್ರಕ್ಕೆ ಹೋಗುವುದೇ ಬೇಕಾಗಿರಲಿಲ್ಲ ಅಲ್ಲಿರುವಂಥ ಹಿಂಬಾರಕರು ಅಲ್ಲಿರುವಂಥ ಜನರೇ ಅವರನ್ನು ಆರಿಸಿ ಕಳಿಸುತ್ತಿದ್ದರು. ಕಾರಣವಿಷ್ಟೆ ಅವರು ಅತ್ಯಂತ ಜನಪ್ರಿಯರಾಗಿದ್ದರು. ಅವರು ನಿಷ್ಠೂರವಾದಿಗಳಾಗಿದ್ದರು ಸತ್ಯವನ್ನು ಯಾರು ಎದುರಿಗೆ ಬೇಕಾದರೂ ಹೇಳಬಲ್ಲವರಾಗಿದ್ದರು ಯಾವುದೇ ನಾಯಕರನ್ನು ಸಂತೈಸಲಿಕ್ಕಾಗಿ ಅವರು ಸತ್ಯವನ್ನು ಹಿಂದೆಮುಂದೆ ಮಾಡಿ ಹೇಳುವವರಾಗಿರಲಿಲ್ಲ.

ಯಾವುದೇ ಸಣ್ಣ ಅಥವಾ ಅತಿ ಕಡಿಮೆ ಅಂತಸ್ತಿನ ವ್ಯಕ್ತಿ ಬಂದರೂ ಕೂಡ ಅತ್ಯಂತ ನಿಷ್ಠೂರವಾಗಿ ಸತ್ಯವನ್ನು ಹೇಳುತ್ತಿದ್ದರು. ಈ ಕಾರಣಕ್ಕಾಗಿಯೇ ಅವರು ಅತ್ಯಂತ ಜನಪ್ರಿಯರಾಗಿ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಈಗಾಗಲೇ ಎಲ್ಲ ಸದಸ್ಯರು ಪಾಟೀಲರ ಸಲುವಾಗಿ ಹಲವಾರು ವಿಚಾರಗಳನ್ನು ಸದನದ ಮುಂದಿಟ್ಟಿದ್ದಾರೆ. ಮುಖ್ಯವಾಗಿ ಈಗಾಗಲೇ ಹಲವಾರು ಸದಸ್ಯರು ದಿವಂಗತ ಪಾಟೀಲರು ಶೈಕ್ಷಣಿಕ ರಂಗದಲ್ಲಿ ಸಹಕಾರ ರಂಗದಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ ಅತ್ಯಂತ ಹೆಚ್ಚಿನ ಕೆಲಸ ಮಾಡಿದ್ದಾರೆ ಎಂದು ಹೇಳಿದರು ಅವರು ಇವತ್ತು ನಮ್ಮ ಬಳಿಯಲ್ಲಿ ಇಲ್ಲ ಆದರೆ ನಾವು ಅವರನ್ನು ನೆನೆಸಿಕೊಳ್ಳಬೇಕಾದದ್ದು ಇಷ್ಟೆ? ಅವರು ಹುಲಕೋಟಿಯಲ್ಲಿ ಸಹಕಾರ ಕ್ಷೇತ್ರದಲ್ಲಿ ಹಲವಾರು ಮಿಲ್‌ಗಳನ್ನು ಏನು ಮಾಡಿದ್ದಾರೆ ನಾನು ಹೋಗಿ ಅವುಗಳನ್ನು ನೋಡಿದ್ದೇನೆ. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರಬಹುದು ಗದಗ್ ಆಗಲಿ ಅಲ್ಲಿರುವ ಬೇರೆಬೇರೆ ತಾಲ್ಲೂಕುಗಳಾಗಲೀ ಅವುಗಳು ಬರಪೀಡಿತ ಪ್ರದೇಶಗಳಾಗಿವೆ ಅಲ್ಲಿ ಕೃಷಿಕರ ಮಕ್ಕಳು ಹಲವಾರು ಜನ ನಿರುದ್ಯೋಗಿಗಳಾಗಿದ್ದಾರೆ. ನಿರುದ್ಯೋಗಿ ಯುವಕರಿಗೆ ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವುದಕ್ಕಾಗಿ ಅಲ್ಲಿ ಸಹಕಾರ ಕ್ಷೇತ್ರದಲ್ಲಿ

ನಾಲ್ಕು ಮಿಲ್‌ಗಳನ್ನು ಮಾಡಿದ್ದಾರೆ. ಅಲ್ಲಿ ಹಾಲಿನ ಡೈರಿ ಮಾಡಿದ್ದಾರೆ ಹೀಗೆ ಬೇರೆಬೇರೆ ಸಂಸ್ಥೆಗಳನ್ನು ಮಾಡಿ ಅಲ್ಲಿ ಸುಮಾರು ನಾಲ್ಕೈದೂ ಸಾವಿರ ಕೈಗಳಿಗೆ ಅನ್ನ ಹಾಕುವಂಥ ಕೆಲಸ ಮಾಡಿಕೊಟ್ಟರು ಇಷ್ಟೇ ಅಲ್ಲ ಈ ಸಹಕಾರಿ ಕ್ಷೇತ್ರದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದರು ಇಡೀ ರಾಜ್ಯದಲ್ಲಿ ಬೇರೆ ಎಲ್ಲಿಯಾದರೂ ನೂಲಿನ ಗಿರಣಿ ನಷ್ಟ ಅನುಭಿಸಿರಬಹುದು ಆದರೆ ಕೆ.ಹೆಚ್. ಪಾಟಿಲರ ಗಿರಣಿಗಳು ಸತತವಾಗಿ ಲಾಭ ಮಾಡಿವೆ. ಹೀಗಾಗಿ ಇವತ್ತು ಧಾರವಾಡ ಜಿಲ್ಲೆಯಲ್ಲಿ ಅವರ ಅಪಾರ ಶಿಷ್ಯವೃಂದ ಏನಿದೆ ಅವರು ಇವತ್ತು ಹೆಚ್ಚಾಗಿ ನೂಲಿನ ಗಿರಣಿಗಳನ್ನು ಮಾಡಿ ಎಷ್ಟೋ ನಿರುದ್ಯೋಗಿಗಳಿಗೆ ಒಳ್ಳೆಯ ಕೆಲಸಗಳನ್ನು ಕೊಟ್ಟಿದ್ದಾರೆ ಮತ್ತೆ ಶ್ರೀ ಕೆ.ಹೆಚ್. ಪಾಟೀಲರು ಛಲಗಾರರಾಗಿದ್ದರು ಯಾವುದಾದರೂ ಒಂದು ಒಳ್ಳೆಯ ಕೆಲಸ ಮಾಡಬೇಕೆಂದು ಅವರ ಮನಸ್ಸಿಗೆ ಬಂದರೆ ಅವರು ಯಾವುದೇ ಅಡ್ಡಿ ಆತಂಕಗಳಿಗೆ ಈಡಾಗುತ್ತಿರಲಿಲ್ಲ.

ಅವರು ಶಿಸ್ತಿನ ಸಿಪಾಯಿಗಳಾಗಿದ್ದರು. ಯಾವುದೇ ಒಂದು ವಿಷಯವನ್ನು ಮಾಡಬೇಕೆಂದರೂ ಅತ್ಯಂತ ಶಿಸ್ತಿನಿಂದ ಮಾಡುತ್ತಿದ್ದರು. ಮಾನ್ಯ ಸದಸ್ಯರಾದ ಕೋಳಿವಾಡ್‌ರವರು ಹೇಳಿದಹಾಗೆ ಅವರು ಎಸ್.ಎಸ್.ಎಲ್.ಸಿ.ಯಲ್ಲಿ ಫೇಲಾಗಿ ರಾಜಕೀಯಕ್ಕೆ ಬಂದಿದ್ದರೂ ಕೂಡ 1978ರಲ್ಲಿ ಗದಗ್ ಕ್ಷೇತ್ರದಲ್ಲಿ ನಿಂತು ಸೋತರು. ಆದರೆ, ಅವರು ನಾನು ಸೋತೆ ಎಂದು ಮನೆಯಲ್ಲಿ ಕುಳಿತುಕೊಳ್ಳಲಿಲ್ಲ. ಅವರ ಕಷ್ಟಪಟ್ಟು ಸಹಕಾರಿ ರಂಗದಲ್ಲಿ ಕೆಲಸ ಮಾಡಿದರು. ಜೊತೆಗೆ ಅವರು ಮೈಸೂರು ಯೂನಿವರ್ಸಿಟಿಯಲ್ಲಿ ಎಂ.ಎ. ಮಾಡಿಕೊಂಡರು. ಅದೇ ರೀತಿ ಲಾ ಓದಿದರು. ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ಮಾಡಿದ್ದರ ಜೊತೆಗೆ, ಒಬ್ಬ ಮಂತ್ರಿಯಾಗಿ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ಅವರು ತಿಳಿದುಕೊಂಡರು. ಇವತ್ತು ನಾವು ಹಲವಾರು ಮಂತ್ರಿಗಳನ್ನು ನೋಡಿದ್ದೇವೆ. ಮಂತ್ರಿಗಳಿಗೆ ಯಾವುದಾದರೊಂದು ಕಾಗದ ಕೊಟ್ಟರೆ, ಅದಕ್ಕೆ ಪೆನ್ನು ಮುಟ್ಟಿಸೋಣವೋ ಬೇಡವೋ ಎನ್ನುವ ಹಾಗೆ ಬಹಳಷ್ಟು ವಿಚಾರ ಮಾಡುತ್ತಾರೆ. ಆದರೆ, ಪಾಟೀಲರು ಯಾವುದೇ ಒಂದು ಬಗ್ಗೆಯ ಕೆಲಸದ ವಿಚಾರದಲ್ಲಿ ಅದು ಗ್ರಾಮದ ಪರವಾಗಿದ್ದರೆ, ಅಲ್ಲಿಯೇ ಒಂದು ನಿಮಿಷದಲ್ಲಿ ಆದೇಶ ಕೊಡುತ್ತಿದ್ದರು. ಆ ಕೆಲಸ ಆದಮೇಲೆ ಪುನಃ ನಿಮ್ಮ ಕೆಲಸ ಆಗಿದೆ ಎಂದು ಎಲ್ಲಾ ಸದಸ್ಯರಿಗೂ ಹೇಳುತ್ತಿದ್ದರು. ಇವತ್ತಿನ ದಿವಸ ಬಹಳಷ್ಟು ಮಂತ್ರಿಗಳು ಅವರಿಂದ ತಿಳಿದುಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಇವತ್ತು ಕೆ.ಹೆಚ್. ಪಾಟೀಲರ ಮರಣದಿಂದ ವೈಯಕ್ತಿಕವಾಗಿ ನನಗೂ ಕೂಡ ನಷ್ಟವಾಗಿದೆ ಮತ್ತು ಈ ರಾಜ್ಯಕ್ಕೂ ಕೂಡ ನಷ್ಟವಾಗಿದೆ. ಈ ಸಂದರ್ಭದಲ್ಲಿ ಅವರ ಸಾವು ಎಲ್ಲರಿಗೂ ನಷ್ಟ ತರುವಂಥಾದ್ದು. ಅವರ ನಿಧನದಿಂದ ಅವರ ಕುಟುಂಬಕ್ಕೂ ಬಹಳ ನಷ್ಟವಾಗಿದೆ. ಅವರ ಕುಟುಂಬಕ್ಕೆ ಸಾಂತ್ವನ ಹೇಳಿ, ಮತ್ತು ಶ್ರೀಯುತ ಪಾಟೀಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳುತ್ತೇನೆ. ಇನ್ನೊಬ್ಬ ಸದಸ್ಯರಾದ ಶ್ರೀಯುತ ಬಾಬ ಸಾಹೇಬ್ ರಾವ್ ಸಾಹೇಬ್ ಮಹಾಗಾಂಕರ್‌ರವರು ಕೂಡ ಇವತ್ತು ನಮ್ಮ ಬಳಿ ಇಲ್ಲ. ಅವರೂ ಕೂಡ ಈ ಸದನದ ಸದಸ್ಯರಾಗಿ ಈ ಕಡೆ ಕುಳಿತುಕೊಳ್ಳುತ್ತಿದ್ದರು. ಅವರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ. ಮಂಜುನಾಥ ಕುನ್ನೂರ್ (ಶಿಗ್ಗಾಂವ್): ಸನ್ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ಶ್ರೀಮಾನ್ ದಿವಂಗತ ಕೆ.ಹೆಚ್. ಪಾಟೀಲರ ದುಃಖಸೂಚಕ ಸಭೆಯಲ್ಲಿ ನಾನು ಕೂಡ ಭಾಗಿಯಾಗಿ, ಅವರ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯುಸುತ್ತೇನೆ. ದಿವಂಗತ ಕೆ.ಹೆಚ್. ಪಾಟೀಲರು ನಿಧನವಾದುದರಿಂದ ಇವತ್ತು ಈ ಸದನ ಅಷ್ಟೇನೂ ಬಡವಾಗಿಲ್ಲ. ಜೊತೆಗೆ

ವಿಶೇಷವಾಗಿ, ಧಾರವಾಡ ಜಿಲ್ಲೆಯು ಒಬ್ಬ ಮಹಾನ್ ನಾಯಕನನ್ನು ಕಳೆದುಕೊಂಡಿರುವುದರಿಂದ, ಇವತ್ತು ನಾವು ತಬ್ಬಲಿಗಳಾಗಿದ್ದೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. ನಾನು ಈ ಶಾಸಕಾಂಗಕ್ಕೆ ಬರುವ ಪೂರ್ವದಲ್ಲಿ ನನಗೆ ಅವರ ಜೊತೆಯಲ್ಲಿ ಅಷ್ಟೊಂದು ಸಂಬಂಧ ಇರಲಿಲ್ಲ. ಆದರೆ, ನಾವು ಶಾಸನ ಸಭೆಗೆ ಬಂದ 5-6 ತಿಂಗಳುಗಳ ನಂತರ, ಅವರ ಜೊತೆ ಸಂಬಂಧವನ್ನು ನೋಡಿದಾಗ, ಅವರ ಆಡಳಿತದ ವ್ಯವಸ್ಥೆಯನ್ನು ನೋಡಿದಾಗ, ಮತ್ತು ಯುವಕರ ಬಗ್ಗೆ ಇರತಕ್ಕ ಕಳಕಳಿಯನ್ನು ನೋಡಿದಾಗ ನಿಜವಾಗಿಯೂ ನಾವು ಅವರಿಗೆ ಆಕರ್ಷಣೀಯವಾಗಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಯಾವುದೇ ಒಂದು ಕೆಲಸಕ್ಕೆ, ನಮ್ಮ ಭಾಗದ ಜನರನ್ನು ಕರೆದುಕೊಂಡು ಹೋದಾಗ, ತಕ್ಷಣವೇ ಅವರ ಕಾರ್ಯದರ್ಶಿಯವರನ್ನು ಕರೆದು, ಅವರಿಗೆ ಡಿಕ್ಟೇಷನ್ ಕೊಡುವುದಾಗಲೀ ಅಥವಾ ಸಂಬಂಧಪಟ್ಟ ಆಯಾ ಇಲಾಖಾ ಅಧಿಕಾರಿಗಳಿಗೆ ತಕ್ಷಣ ಫೋನ್ ಮಾಡಿ, ಆ ಕೆಲಸವನ್ನು ಮಾಡಿಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತಿದ್ದರು. ಇದನ್ನು ನೋಡಿದಾಗ, ಇಂತಹ ಸಚಿವರು ಸಂಪುಟದಲ್ಲಿ ಇದ್ದರೆ, ನಿಜವಾಗಿಯೂ ಈ ರಾಜ್ಯ ಇಡೀ ರಾಷ್ಟ್ರದಲ್ಲಿಯೇ ಮಾದರಿ ರಾಜ್ಯವಾಗುವುದರಲ್ಲಿ ಸಂದೇಹವಿರಲಿಲ್ಲ ಎಂಬ ಮಾತನ್ನು ಕೂಡ ಹೇಳಬಯಸುತ್ತೇನೆ. ಸನ್ಮಾನ್ಯ ಕೆ.ಹೆಚ್. ಪಾಟೀಲರು ನಮ್ಮ ಹುಲಿಕೋಟೆಯ ಹುಲಿ ಎಂಬ ಮಾತನ್ನು ಎಲ್ಲರೂ ಆಡಿದ್ದನ್ನು ನೋಡಿದಾಗ, ಅವರು ಕೇವಲ ಹುಲಿಕೋಟೆಯ ಹುಲಿ ಅಲ್ಲ, ಈ ರಾಜ್ಯದ ಈ ರಾಷ್ಟ್ರದ ಸಹಕಾರಿ ಹುಲಿಯಾಗಿದ್ದರು ಎನ್ನತಕ್ಕಂಥ ಮಾತನ್ನು ಕೂಡ ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ನಿಜವಾಗಿಯೂ ಈ ಸದನದಲ್ಲಿ ಅವರು ಮಾಡಿದಂಥ ಕೆಲಸಕಾರ್ಯಗಳ ಬಗ್ಗೆ ನಾವು ಯಾವ ಮಾತಿನಿಂದ ಶ್ಲಾಘನೆ ಮಾಡಿದರೂ ಕಡಿಮೆಯೇ. ನಾನು ಇವತ್ತಿನದಿವಸ ಶಾಸಕಾಂಗ ಸಭೆಯ ಮುಖಾಂತರ ಹಾಗೂ ತಮ್ಮ ಮುಖಾಂತರ, ನಮ್ಮ ನೆಚ್ಚಿನ ನಾಯಕರಾದ ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಈ ಶಾಸಕಾಂಗ ಸಭೆಯ ಮುಖಾಂತರ, ಶಾಸಕಾಂಗದ ಎಲ್ಲಾ ಪಕ್ಷಗಳ ಶಾಸಕರೂ ಹುಲಿಕೋಟೆಗೆ ಒಂದು ಪ್ರವಾಸವನ್ನು ಕೈಗೊಂಡು, ಅವರು ಮಾಡಿದಂಥ ಕೆಲಸಗಳನ್ನು ಕಣ್ಣಿನಿಂದ ವೀಕ್ಷಿಸಿದಾಗ, ನಿಜವಾಗಿಯೂ ಪ್ರತಿಯೊಬ್ಬ ಶಾಸಕರಲ್ಲಿಯೂ ಆ ಕೆಲಸಗಳನ್ನು ಮಾಡತಕ್ಕ ಸ್ಫೂರ್ತಿ ಬೆಳೆದುಬರುತ್ತದೆ. ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದೃಷ್ಟಿಯಿಂದ ಇವತ್ತು ಅವರು ಹೋದರೂ ಕೂಡ, ನಿಜವಾಗಿಯೂ ಅವರೇ ಬಹಳ ಪುಣ್ಯವಂತರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ಕಟ್ಟಿದಂಥ ಸಂಸ್ಥೆಗಳನ್ನು ಬೆಳೆಸಿಕೊಂಡು, ಉಳಿಸಿಕೊಂಡು ಹೋಗತಕ್ಕ ಒಂದು ಸಾಮರ್ಥ್ಯ ಅವರ ಪುತ್ರರಾದ ಶ್ರೀಮಾನ್ ಹೆಚ್.ಕೆ. ಪಾಟೀಲರು ವಿಧಾನ ಪರಿಷತ್ತಿನ ಸದಸ್ಯರು ಅವರಿಗೆ ದೇವರು ಆ ಶಕ್ತಿಯನ್ನು ಕೊಟ್ಟಿದ್ದಾನೆ.

ಜೊತೆಗೆ ಅವರ ಅಣ್ಣನ ಮಗನಾಗಿರತಕ್ಕ ಡಿ.ಆರ್. ಪಾಟೀಲರೂ ಕೂಡಾ ಇವತ್ತು ಧಾರವಾಡ ಜಿಲ್ಲಾ ಪರಿಷತ್ತಿನಲ್ಲಿ ವಿರೋಧ ಪಕ್ಷದ ಉಪನಾಯಕರಾಗಿದ್ದಾರೆ. ಇವತ್ತಿನದಿವಸ ಅವರೂ ಕೂಡಾ ಈ ಎಲ್ಲಾ ಸಂಸ್ಥೆಗಳನ್ನೂ ನೋಡಿಕೊಂಡು, ಸಮರ್ಪಕವಾಗಿ ಅದರ ಆಡಳಿತವನ್ನು ನಡೆಸಿಕೊಂಡು ಹೊರಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ದೃಷ್ಟಿಯಿಂದ ಇವತ್ತು ಅವರು ಸಹಕಾರಿ ಕ್ಷೇತ್ರದಲ್ಲಾಗಲೀ ಮಾಡಿರತಕ್ಕಂಥ ಸಾಧನೆಗಳನ್ನು ನಾವು ನೋಡಿಕೊಂಡು, ಗಮನಕೊಟ್ಟು, ನಾವೂ ಕೂಡಾ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಅದೇ ರೀತಿ ಕೆಲಸ ಮಾಡಿದ್ದೇ ಆದರೆ ನಿಜವಾಗಿಯೂ ಪೂಜ್ಯ ಮಹಾತ್ಮಾ ಗಾಂಧೀಜಿಯವರು ಕಂಡ ರಾಮರಾಜ್ಯದ ಕನಸನ್ನು ನನಸನ್ನಾಗಿ ಮಾಡಬಹುದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶರಣರ ಕೊನೆಯನ್ನು ಮರಣದಲ್ಲಿ ನೋಡು ಎಂಬ ನಾಣ್ನುಡಿಯನ್ನು ಉದಾಹರಣೆಯಾಗಿ ತೆಗೆದುಕೊಂಡು ಇವತ್ತು ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಹಾರೈಸಿ, ಅವರ ಕುಟುಂಬ ವರ್ಗದವರಿಗೆ, ಬಂಧುವರ್ಗದವರಿಗೆ, ಅವರ ಆಗಲುವಿಕೆಯ ದುಃಖವನ್ನು ತಾಳಿಕೊಳ್ಳುವ ಒಂದು ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸಿ, ಅದೇ ರೀತಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾದ ಶ್ರೀ ಬಾಬುಸಾಹೇಬ್ ರಾವ್ ಸಾಹೇಬ್ ಮಹಾಗಾಂವ್‌ಕರ್ ಅವರ ಆತ್ಮಕ್ಕೂ ಪರಮಾತ್ಮನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಗೋಪಿನಾಥ್ ಆರ್ ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮಧ್ಯದಲ್ಲಿ ನನ್ನ ಆತ್ಮೀಯರೂ, ಅಣ್ಣನ ಸಮಾನರೂ ಆಗಿದ್ದ ಕೆ.ಹೆಚ್. ಪಾಟೀಲರು ಇಲ್ಲ. ಅವರ ಮಾರ್ಗದರ್ಶನ ಇನ್ನು ಮುಂದೆ ಇಲ್ಲ. ಈ ಒಂದು ದುಃಖದ ವಾತಾವರಣದಲ್ಲಿ ನಾವು, ಅವರು ಇದ್ದಾಗ ಆಡಿದಂಥ ಮಾತು, ಮಾಡಿದಂಥ ಕೆಲಸ, ಅವರು ಕಂಡಂಥ ಕನಸನ್ನು ನನಸನ್ನಾಗಿ ಮಾಡುವ ಜವಾಬ್ದಾರಿ ಅವರ ಹಿಂದಿರುವಂತಹ ಅನುಯಾಯಿಗಳ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲೇ ಹೇಳಿದಂತೆ ನಾನು ಮಾನ್ಯ ಪಾಟೀಲರನ್ನು ಅಣ್ಣಾ ಎಂದು ಕರೆಯುತ್ತಿದ್ದೆ. ನಾನು 1953ನೇ ಇಸವಿಯಿಂದಲೂ ರಾಜಕೀಯದಲ್ಲಿ ಅವರ ನೆರಳಾಗಿ, ಅವರ ಹಿಂಬಾಲಕನಾಗಿ, ಅವರ ಸಂಗಡ ಪ್ರತಿಯೊಂದು ಹೋರಾಟದಲ್ಲೂ, ಚಳುವಳಿಯಲ್ಲೂ ಭಾಗವಹಿಸಿದ್ದೇನೆ. ಇನ್ನೂವರೆಗೂ ಅವರ ಮಾತುಗಳನ್ನು ನೆನಪುಮಾಡಿಕೊಳ್ಳುತ್ತಿದ್ದೇನೆ. ನನಗೂ ಅವರಿಗೂ ಅನೇಕ ಸಾರಿ ಚರ್ಚೆಯಾಗಿ ಭಿನ್ನಾಭಿಪ್ರಾಯ ಬರುತ್ತಿತ್ತು. ಅವರ ಮನಸ್ಸಿಗೆ ಇದು ಸರಿಯಿಲ್ಲ. ನಾನು ಮಾಡಿದ್ದು ತಪ್ಪು ಎಂದು ಕಂಡು ಬಂದ ತಕ್ಷಣ, ಅವರು ನೀನು ಹೇಳಿದ್ದು ಸರಿ ಎಂಬ ಮಾತನ್ನು ನಿಚ್ಚಳ ಮನಸ್ಸಿನಿಂದ ಹೇಳುತ್ತಿದ್ದರು. ಸಹಕಾರಿ ಕ್ಷೇತ್ರ ಇನ್ನೂ ಬೆಳೆಯಬೇಕು. ಸಹಕಾರಿ ಕ್ಷೇತ್ರದಿಂದಲೇ ರೈತರ, ಬಡವರ, ದೀನರ ಉದ್ಧಾರವಾಗುತ್ತದೆ ಎಂಬ ವಿಶ್ವಾಸ ಅವರಿಗೆ ಪೂರ್ಣವಾಗಿತ್ತು. ಬರೀ ವಿಶ್ವಾಸವಷ್ಟೇ ಅಲ್ಲ, ಅದನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಪ್ರಯತ್ನ ಮಾಡಿ ಅವರು ಯಶಸ್ವಿಯಾದರು. ಸಹಕಾರಿ ಕ್ಷೇತ್ರ, ಸರ್ಕಾರಿ ಕ್ಷೇತ್ರವಾಗಬಾರದು ಎಂಬುದು ಅವರ ನಿಲುವಾಗಿತ್ತು. ವೈಯಕ್ತಿಕವಾಗಿ ಯಾವುದೇ ಸಂಘಸಂಸ್ಥೆಗಳನ್ನು ಕಟ್ಟಿದ್ದರೂ ಅದರ ದುರುಪಯೋಗ ತೆಗೆದುಕೊಳ್ಳಬಾರದು ಎಂಬುದು ಅವರ ಉತ್ಕಟೇಚ್ಛೆಯಾಗಿತ್ತು. ಹಿಂದೆ ಇದ್ದ ಸಹಕಾರಿ ಆಕ್ಟ್ ಸರಿಯಿಲ್ಲ. ಅದಕ್ಕೆ ನಾವು ಅಮೆಂಡ್‌ಮೆಂಟ್ ತರಬೇಕೆಂದು ಹೊಸ ಆಕ್ಟ್ ತರಬೇಕೆಂದು ಪ್ರಯತ್ನ ಮಾಡಿದರು. ಪ್ರಯತ್ನ ಮಾಡಿದರೂ ಅದನ್ನು ಸಾಧಿಸಲು ಆಗಲಿಲ್ಲ. ಆದರೆ ಇತ್ತೀಚೆಗೆ ಅವರು ಬಹಳ ಆಸ್ಥೆ ವಹಿಸಿ ಹೊಸ ಸಹಕಾರಿ ಆಕ್ಟ್‌ನ್ನು ನಮ್ಮ ಮುಂದೆ ತಂದಿದ್ದರು. ಆದುದರಿಂದ ನಾವು ಅದರಂತೆ ಮುಗ್ಧ ರೈತರ ನಿಜವಾದ ಹಿತರಕ್ಷಣೆಯನ್ನು ಮಾಡುವಂತಹ ರೀತಿಯಲ್ಲಿ ಇದನ್ನು ತರೋಣ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ರೈತರು ಬೆಳೆಯುವಂತಹ ಆಹಾರಪದಾರ್ಥಗಳು ಏನಿವೆ ಅವುಗಳಿಗೆ ಸರಿಯಾದ ಬೆಲೆ ಸಿಗಬೇಕೆನ್ನುವ ದೃಷ್ಟಿಯಿಂದ ಅವರು ಅನೇಕ ಕಾಯಿದೆ ಕಾನೂನುಗಳನ್ನು ಮಾಡುವುದಕ್ಕೆ ಇಚ್ಛೆಪಟ್ಟಿದ್ದರು.

ಇದಕ್ಕಾಗಿ ಸಹಕಾರಿ ಆಕ್ಟ್ ಮಾಡಿದರು. ಪ್ರೊಸೆಸಿಂಗ್ ಯೂನಿಟ್‌ಗಳನ್ನು ಎಲ್ಲಾ ಕಡೆ ಮಾಡುವುದಕ್ಕೆ ಪ್ರಯತ್ನಪಟ್ಟು ಅದರಲ್ಲಿ ಯಶಸ್ವಿಯಾದರು. ಎ.ಪಿ.ಎಂ.ಸಿ. ಆಕ್ಟ್ ಕೂಡ ತರುವುದಕ್ಕೆ ಪ್ರಯತ್ನ ಮಾಡಿದರು. ಈಗಿರುವ ಎ.ಪಿ.ಎಂ.ಸಿ. ಆಕ್ಟ್‌ನಲ್ಲಿ ರೈತರ ಶೋಷಣೆ ಆಗುತ್ತಿದೆ. ಆದುದರಿಂದ ಇದರಲ್ಲಿ ಬದಲಾವಣೆ ಆಗಬೇಕೆಂದು

ಹಗಲಿರುಳೂ ಪ್ರಯತ್ನ ಮಾಡಿ ಎ.ಪಿ.ಎಂ.ಸಿ. ಆಕ್ಟ್‌ನ್ನು ಈ ಸಲ ನಮ್ಮ ಮುಂದೆ ತರಬೇಕೆಂದು ಪ್ರಯತ್ನ ಮಾಡಿದ್ದರು. ಬಹುಶಃ ಮುಂದಿನ ಸಲ ಅಥವಾ ಈಗಲೇ ಇದನ್ನು ತರಬೇಕು ಎಂದು ನಾನು ತಮ್ಮ ಮುಖಾಂತರ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಅವರು ಮಾಡಿರತಕ್ಕಂಥ ಹಾಗೂ ಅವರು ಮಾಡಬೇಕಾಗಿದ್ದಂಥ. ಕೊ-ಆಪರೇಟೀವ್ ಆಕ್ಟ್, ಎ.ಪಿ.ಎಂ.ಸಿ ಆಕ್ಟ್-ಇವುಗಳನ್ನು ಆದಷ್ಟು ಬೇಗನೆ ಜಾರಿಯಲ್ಲಿ ತರಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇದರ ಜೊತೆಗೆ ಅವರ ಸ್ಮಾರಕ ಆಗಬೇಕು. ಅನೇಕ ಧುರೀಣರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಆದರೆ ನಮ್ಮ ಲೆಜಿಸ್‌ಲೇಟರ್ಸ್ ಬುಕ್‌ನಲ್ಲಿ ಮಾತ್ರ ಅವರ ಹೆಸರು ಉಳಿದಿದೆ. ಹಾಗೆ ಆಗಬಾರದು. ಯಾರು ನಮ್ಮ ದೇಶವನ್ನು ನಮ್ಮ ನಾಡನ್ನು ನಮ್ಮ ಜಿಲ್ಲೆಯನ್ನು ನಮ್ಮ ಊರನ್ನು ಉದ್ಧಾರ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಯಾರು ದೇಶಕ್ಕಾಗಿ ಆದರ್ಶವಾದಂತಹ ಸಂಘ ಸಂಸ್ಥೆಗಳನ್ನು ಕಟ್ಟಿ, ಇಡೀ ದೇಶಕ್ಕೆ ಹೆಸರನ್ನು ತಂದಂತಹ ವ್ಯಕ್ತಿಯನ್ನು ನಾವು ಮರೆಯಕೂಡದು. ಮರೆಯಬಾರದು. ಆ ಒಂದು ದೃಷ್ಟಿಯಿಂದ ಅವರಿಗೆ ಒಂದು ಯೋಗ್ಯವಾದ ಅವರ ಹೆಸರು ಅಮರವಾಗಿ ಉಳಿಯುವಂತಹ ಒಂದು ಸ್ಮಾರಕವನ್ನು ನಾವು ಮಾಡಬೇಕು. ಬರಿ ಬಿಲ್ಡಿಂಗ್ ಕಟ್ಟಿಸಬೇಕು ಎನ್ನುವ ವಿಚಾರ ಅವರಲ್ಲಿ ಇರಲಿಲ್ಲ. ಈ ಸಹಕಾರ ಕ್ಷೇತ್ರದಲ್ಲಿ ಆಗುವಂತಹ ಲಾಭ ಏನಿದೆ ಅದು ಬಡವರಿಗೆ ಮುಟ್ಟಬೇಕು ಎನ್ನುವ ಉದ್ದೇಶ ಅವರಿಗೆ ಇತ್ತು. ಅದನ್ನು ಒಂದು ವಿದ್ಯಾ ಸಂಸ್ಥೆಯನ್ನಾಗಿ ಮಾಡಿ, ಬೃಹದಾಕಾರದ ಒಂದು ಸಂಸ್ಥೆಯನ್ನಾಗಿ ಮಾಡಿ, ಸಹಕಾರಿ ಕ್ಷೇತ್ರದಲ್ಲಿ ಈ ಶಿಕ್ಷಣದ ಮೂಲಕ ಆಗುವಂತಹ ಲಾಭದ ಬಗ್ಗೆ ಜನಗಳಿಗೆ ತಿಳಿ ಹೇಳುವಂತಹ ಸ್ಮಾರಕವನ್ನಾಗಿ ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ಬಹಳ ಹಠವಾದಿಗಳು. ಅವರಲ್ಲಿ ಛಲ ಬಹಳ ಇತ್ತು. ಅವರು ಹೇಳಿದ್ದನ್ನು ಮಾಡುತ್ತಿದ್ದರು. ಕಾಂಗ್ರೆಸ್ ಎರಡಾಗಿ ಒಡೆದಾಗ ಅವರಿಗೂ ನಮಗೂ ಭಿನ್ನಾಭಿಪ್ರಾಯ ಬಂತು. ನನಗೂ ಅವರಿಗೂ ಭಿನ್ನಾಭಿಪ್ರಾಯ ಬಂತು. ಆಗ ನಾನು ಇದು ಸರಿಯಲ್ಲ, ನೀವು ಇಂದಿರಾಗಾಂಧಿ ಕಾಂಗ್ರೆಸ್‌ಗೆ ಬರಬೇಕು ಎಂದು ಹೇಳಿದಾಗ ಇಲ್ಲಾ ನಿನ್ನ ಮಾತು ನಾನು ಕೇಳುವುದಿಲ್ಲ, ಬೇಕಾದರೆ ನೀನು ಹೋಗು ಎಂದು ಹೇಳಿದರು. 30 ವರ್ಷಗಳಿಂದ ನಾವಿಬ್ಬರೂ ಒಂದಡೆ ಸೇರಿದ್ದರೂ ಕೂಡ ಆಗ ನಾವು ಹೊರಗೆ ಹೋಗಬೇಕಾಯಿತು. ನಾವಿಬ್ಬರು ಬೇರೆ ಬೇರೆ ಆಗಬೇಕಾಯಿತು. ಆದರೆ ಮುಂದೆ 5-6 ತಿಂಗಳಲ್ಲೇ ಅವರು ನಮ್ಮ ಜೊತೆಗೆ ಬಂದರು. ಅಂದಿನಿಂದ ಇವತ್ತಿನವರೆಗೂ ಕಾಂಗ್ರೆಸ್ ಅನ್ನು ಭದ್ರವಾದ ಸಂಸ್ಥೆಯನ್ನಾಗಿ ಮಾಡಲಿಕ್ಕೆ ಕಾರಣಕರ್ತರಾದರು ಎಂದು ಹೇಳಲಿಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ಅಂತಹವರ ಸ್ಮಾರಕವನ್ನು ಮಾಡಬೇಕು. ಅವರು ಆಡಿದಂತ ಮಾಡಿದಂತಹ ಅವರು ಕನಸು ಕಂಡಂತಹ ಎಲ್ಲಾ ವಿಷಯಗಳನ್ನು, ವಿಶೇಷವಾಗಿ ರೈತರ ಬಗ್ಗೆ ಅವರಿಗೆ ಕಳಕಳಿ ಇದ್ದದ್ದನ್ನು ನಾವು ತಿಳಿದುಕೊಂಡು ಆ ಮಾರ್ಗದಲ್ಲಿ ನಾವು ನಡೆಯಬೇಕು. ಶಾಸಕರಾದಂತಹವರಿಗೆ ಆದರ್ಶಪ್ರಿಯರಾಗಿದ್ದರು. ನಾವು ಶಾಸಕರಾಗಿ ಯಾವ ಕೆಲಸ ಮಾಡಬೇಕು, ಹೇಗೆ ಮಾಡಬೇಕು, ಎನ್ನುವುದನ್ನು ಅವರು ಮಾಡಿ ತೋರಿಸಿದ್ದಾರೆ. ಅದನ್ನು ಅನುಕರಣೆ ಮಾಡತಕ್ಕಂಥ ಜವಾಬ್ದಾರಿ ನಮ್ಮದು. ಅವರು ಆಡಿದಂತಹ ಮಾತುಗಳು ಅವರು ಮಾಡಿದಂತಹ ಕೆಲಸಗಳು ಮತ್ತು ಅವರು ಕಂಡಂತಹ ಕನಸನ್ನು ನನಸಾಗಿ ಮಾಡಲು ನಮಗೆ ದೇವರು ಶಕ್ತಿ ಸಾಮರ್ಥ್ಯಗಳನ್ನು ಕೊಡಲಿ. ಧಾರವಾಡ ಜಿಲ್ಲೆಯ ಜನರು ಇವತ್ತು ತಬ್ಬಲಿಗಳಾಗಿದ್ದಾರೆ. ಧಾರವಾಡ

ಜಿಲ್ಲೆಯ ಜನರು ತಬ್ಬಲಿಗಳಾಗಿದ್ದಾರೆ ಎನ್ನುವುದಕ್ಕಿಂತ ಇವತ್ತು ನಮ್ಮ ಕಣ್ಣು ಮುಂದೆ ಕತ್ತಲು ಕವಿದಿದೆ. ಇವತ್ತು ಆ ದೇವರು ಅವರ ಕನಸನ್ನು ನನಸು ಮಾಡಲಿಕ್ಕೆ ನಮಗೆ ಶಕ್ತಿ ಕೊಡಲಿ ಎಂದು ಬೇಡಿಕೊಂಡು, ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಮಕ್ಕಳು, ಬಂಧುಗಳಿಗೆ ಸ್ವಾಂತನ ಹೇಳಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸದನದ ಹಿರಿಯ ಸದಸ್ಯರು ಹಾಗೂ ಶ್ರೇಷ್ಠ ನಾಯಕರಾದ ಸಚಿವ ಕೆ.ಎಚ್. ಪಾಟೀಲರು ಹಾಗೂ ಬಾಬಸಾಹೇಬ್, ರಾವ್ ಸಾಹೇಬ್ ಮಹಾಗಾಂವ್‌ಕರ್‌ರವರು ನಮ್ಮನ್ನು ಆಗಲಿ ಹೋಗಿರುವ ಬಗ್ಗೆ ತಾವು ಮಂಡಿಸಿದಂತಹ ಗೊತ್ತುವಳಿಯನ್ನು ಬೆಂಬಲಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಸನ್ಮಾನ್ಯ ಸ್ನೇಹಿತರು ಈಗಾಗಲೇ ವಿವರಗಳನ್ನು ಹೇಳಿದ್ದಾರೆ. ರೈತರ ಬಗ್ಗೆ ಕಾರ್ಮಿಕರ ಬಗ್ಗೆ ವಿದ್ಯೆಯ ಬಗ್ಗೆ ಗ್ರಾಮೀಣ ಜನ ಜೀವನವನ್ನು ಮೇಲಕ್ಕೆ ಎತ್ತುವ ಬಗ್ಗೆ ಅವರು ಮಾಡಿದಂತಹ ಕೆಲಸ ಕಾರ್ಯಗಳನ್ನು ಈಗಾಗಲೇ ತಾವು ಹಾಗೂ ಈ ಸದನದ ನಾಯಕರು, ನನ್ನ ಸ್ನೇಹಿತರುಗಳು ಹೇಳಿದ್ದಾರೆ. ಮುಖ್ಯವಾಗಿ ಅವರಲ್ಲಿ ಇದ್ದದ್ದು ಸ್ವಾವಲಂಬನೆ ಮಹಾತ್ಮಾ ಗಾಂಧೀಜಿಯವರು ಹೇಳಿದ ಮಾತನ್ನು ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಈ ದೇಶ ಗ್ರಾಮಗಳಿಂದ ಕೂಡಿದ ದೇಶ. ಗ್ರಾಮಗಳಲ್ಲಿರತಕ್ಕಂಥ ರೈತರು. ಕೂಲಿಕಾರರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಎಲ್ಲಿಯವರೆಗೆ ಏಳಿಗೆಯಾಗವುದಿಲ್ಲವೋ ಅಲ್ಲಿಯವರೆಗೆ ರಾಷ್ಟ್ರ ಏಳಿಗೆಯಾಗುವುದಿಲ್ಲ. ಎನ್ನುವ ಮಾತನ್ನು ಅವರು ಮನಸ್ಸಿನಲ್ಲಿಟ್ಟುಕೊಂಡು ಗ್ರಾಮೀಣ ಜೀವನದ ಸಮಗ್ರ ಏಳಿಗೆಗೆ ಶೈಕ್ಷಣಿಕ, ಔದ್ಯಮಿಕ ದೃಷ್ಟಿಯಿಂದ ರಾಜ್ಯದ ಹಿತದೃಷ್ಟಿಯಿಂದ ಅವರು ತಮ್ಮ ಕೆಲಸಕಾರ್ಯಗಳನ್ನು ಹಮ್ಮಿಕ್ಕೊಂಡು ಅದನ್ನು ಸಾಧಿಸಿದ ತಮ್ಮ ಕರ್ತವ್ಯವನ್ನು ನಿರ್ವಹಿಸಿದ ಧೀರ, ಕೆಚ್ಚೆದೆಯ ಒಬ್ಬ ಮಹಾನಾಯಕ. ತಾವು ಹೇಳಿದಂತೆ, ಈಗಾಗಲೇ ಹುಲಿಕೋಟಿಯಲ್ಲಿ ನಮ್ಮ ಎಲ್ಲರ ಕಣ್ಣಿಗೆ ಕಾಣುವಂತೆ ಅದನ್ನು ಸಾದಿಸಿ ತೋರಿಸಿದ್ದಾರೆ. ಅವರ ಆದರ್ಶ ಅನುಕರಣೀಯ ಅಂತಹ ಒಂದು ಸ್ವಾವಲಂಬನೆಯುತವಾದ ಗ್ರಾಮರಾಜ್ಯದ ಕನಸನ್ನು ಅವರು ಕಂಡಿದ್ದರು. ಅವರ ಕೆಲಸಕಾರ್ಯಗಳನ್ನು ನಾವು ಮುಂದುವರಿಸಿಕೊಂಡು ಹೋದರೆ ನಿಜವಾಗಿ ನಾವು ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದಂತೆ ಆಗುತ್ತದೆಂದು ನಾನು ಭಾವಿಸುತ್ತೇನೆ.

ಇನ್ನು ತಮ್ಮ ಹುಲಕೋಟಿಯಲ್ಲಿ ಅಷ್ಟೇ ಅಲ್ಲ, ಧಾರವಾಡ ಜಿಲ್ಲೆಯ ರಾಣಿಬೆನ್ನೂರು ಹಿರೇಕೆರೂರು ದಕ್ಷಿಣದ ಭಾಗದ ಜನರಿಗೆ ನೂಲಿನ ಗಿರಣಿ ಅವಶ್ಯಕತೆ ಇದೆಯೆಂದು ಹೇಳಿದಾಗ ಮಾನ್ಯ ಸ್ನೇಹಿತರಾದ ಕೋಳಿವಾಡ್‌ರವರಿಗೂ ಮತ್ತು ನನಗೂ ಅವಕಾಶವನ್ನು ಕಲ್ಪಿಸಿಕೊಟ್ಟು ರಾಣಿಬೆನ್ನೂರಿನಲ್ಲಿ ಸ್ಪಿನ್ನಿಂಗ್ ಮಿಲ್ ಪ್ರಾರಂಭಿಸಿ, ಅದು ಈಗ ಪೂರ್ಣಗೊಳ್ಳುವ ಹಂತದಲ್ಲಿದೆ. ಇನ್ನು ನಾಲ್ಕಾರು ತಿಂಗಳುಗಳಲ್ಲಿ ಅದು ಉತ್ಪಾದನೆ ಪ್ರಾರಂಭಿಸುವಂಥ ಹಂತದಲ್ಲಿದೆ. ಸ್ಮಾರಕ ಕಟ್ಟುವುದರಲ್ಲಿ ಅಥವಾ ದೊಡ್ಡ ದೊಡ್ಡ ಫೋಟೋಗಳನ್ನುಹಾಕುವುದರಲ್ಲಿ ಕೆ.ಹೆಚ್. ಪಾಟೀಲರಿಗೆ ವಿಶ್ವಾಸ ಇದ್ದಿರಲಿಲ್ಲ ಅನ್ನುವ ಮಾತನ್ನು ಸ್ಪಷ್ಟವಾಗಿ ಹೇಳಲಿಕ್ಕೆ ನಾನು ಬಯಸುತ್ತೇನೆ. ಅವರಿಗೆ ಬೇಕಾಗಿದ್ದುದು ಕಾರ್ಯ. ಅವರು ಹೆಸರಿಗಾಗಿ ಎಂದೂ ಬಡಿದಾಡಿದಂಥ ವ್ಯಕ್ತಿಯಾಗಿರಲಿಲ್ಲ. ಅಧಿಕಾರ ಅವರನ್ನು ಹಿಂಬಾಲಿಸಿ ಬರುತ್ತಿತ್ತೇ ವಿನಃ ಅವರು ಅಧಿಕಾರಕ್ಕಾಗಿ ಬೆನ್ನು ಹತ್ತಿದಂಥ ವ್ಯಕ್ತಿ ಅಲ್ಲ. ಅದಕ್ಕಾಗಿ ಅವರು ಗ್ರಾಮೀಣ ಸಚಿವರಾಗಿ ಒಂದು ಹೇಳಿಕೆ ಕೊಟ್ಟಿದ್ದರು. 1992-93ರ ಸಾಲಿನಲ್ಲಿ ಕರ್ನಾಟಕದ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ

ಸರಬರಾಜು ಯೋಜನೆಯನ್ನು ಪೂರೈಸುತ್ತೇವೆ. ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಸಂಪೂರ್ಣವಾದಂಥ ಒಂದು ಯೋಜನೆಯನ್ನು ಕಾರ್ಯಗೊಳಿಸುತ್ತೇವೆ ಎನ್ನುವ ಮಾತನ್ನು ಹೇಳಿದರು. ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಹೆಚ್. ಪಾಟೀಲರು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾಡಿದ ಯೋಜನೆಗಳನ್ನು ಬಿಟ್ಟುಹೋಗಿದ್ದಾರೆ. ಆ ಯೋಜನೆಗಳನ್ನು ಈ ಸರ್ಕಾರ ಪೂರ್ಣಗೊಳಿಸಿದರೆ ಗ್ರಾಮೀಣ ಜನಜೀವನದ ಒಂದು ಅನುಕೂಲತೆಗೆ ಹೆಚ್ಚಿನ ಆಸರೆಯಾಗುತ್ತದೆ ಎನ್ನುವ ಮಾತನ್ನು ಹೇಳಿ, ಈ ವರ್ಷ ಕೆ.ಹೆಚ್. ಪಾಟೀಲರ ಹೆಸರಿನಲ್ಲಿ ಗ್ರಾಮಗಳಿಗೆ ಕುಡಿಯುವ ನೀರಿನ ಸಂಪೂರ್ಣ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಾಜಕೀಯದಿಂದ ದೂರ ಇರಬೇಕೆನ್ನುವ ವಿಚಾರವಿದ್ದಂಥ ವ್ಯಕ್ತಿಗಳಲ್ಲಿ ನಾನು ಒಬ್ಬ ನನ್ನನ್ನು ಸುಮಾರು 20 ವರ್ಷಗಳ ಹಿಂದೆ ರಾಜಕೀಯದಲ್ಲಿ ತುರುಕಿಸಿದಂಥ ವಿಚಾರವನ್ನು ಇವತ್ತು ನಾನು ಸ್ಮರಿಸಿಕೊಳ್ಳಬೇಕು. ರಾಜಕೀಯವಾಗಿ ನನಗೆ ವಿರೋಧ ಇಲ್ಲದೆ ಇರಬಹುದು. ಆದರೆ, ಅನೇಕ ಹಿರಿಯರಲ್ಲಿ ನನಗೆ ಪ್ರೋತ್ಸಾಹ ಕೊಟ್ಟವರಲ್ಲಿ ಪ್ರಾಮುಖ್ಯವಾದವರು ಶ್ರೀ ಕೆ.ಹೆಚ್. ಪಾಟೀಲರು, ನಾನು ರಾಜಕೀಯ ಜೀವನ ಪ್ರಾರಂಭಿಸಲಿಕ್ಕೆ ಅವರು ಕಾರಣೀಭೂತರು, ಎನ್ನುವ ಮಾತನ್ನು ನಾನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಕೊನೆಯದಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಅನೇಕರು ಪ್ರತ್ಯೇಕವಾದಂಥ ತಮ್ಮ ಮನೆಯವರಿಂದ ಕಟ್ಟಿಸಿಕೊಳ್ಳುವುದನ್ನು ನೋಡುತ್ತಿದ್ದೇವೆ. ಅಧ್ಯಕ್ಷರೆ, ಕೆ.ಹೆಚ್. ಪಾಟೀಲರ ಕೊನೆಯ ಶವ ಸಂಸ್ಕಾರಕ್ಕೆ ತಾವೇ ಬಂದಿದ್ದೀರಿ. ಸಾರ್ವಜನಿಕರ, ಸಾಮಾನ್ಯ ಜನರ ರುದ್ರ ಭೂಮಿಯಲ್ಲಿ ಅವರ ಶವ ಸಂಸ್ಕಾರ ನಡೆಯಿತು. ಇದೇ ಅವರ ವಿಚಾರ. ಅವರು ಇರುವಾಗ ಮಾತ್ರವಲ್ಲ, ಸತ್ತ ಮೇಲೂ ಸಹಿತ ಜನಸಾಮಾನ್ಯರಲ್ಲಿ ಒಳಗೊಂಡಿರಬೇಕು ಎನ್ನುವ ವಿಚಾರವನ್ನು ನಾವು ಮರೆಯಕೂಡದು. ಸರ್ವ ಸಾಮಾನ್ಯರ ರುದ್ರ ಭೂಮಿಯಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಿಕೊಳ್ಳುವಂಥ ವಿಚಾರ ಅವರದಾಗಿತ್ತು. ಅದಕ್ಕಾಗಿ ಅವರ ಕಾರ್ಯಗಳನ್ನು ಜನತೆಗೆ ಮುಟ್ಟಿಸಿದರೆ ಅವರಿಗೆ ಶ್ರದ್ಧಾಂಜಲಿಯನ್ನು ಮನ ಪೂರ್ವಕವಾಗಿ ಅರ್ಪಿಸಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ನಾವು ಅನೇಕರನ್ನು ಕಂಡಿದ್ದೇವೆ. ಅಧ್ಯಕ್ಷರೆ, ಸಾಮಾಜಿಕ ಜೀವನದಲ್ಲಿ, ರಾಜಕೀಯ ಜೀವನದಲ್ಲಿ ಜೀವಂತವಿದ್ದಾಗಲೇ ಮಾಡಬಾರದ, ಅಲ್ಲಸಲ್ಲದ ಕಾರ್ಯಗಳನ್ನು ಮಾಡಿ ಇದ್ದಾಗಲೇ ಸತ್ತ ವಕ್ತಿ ಅನಿಸಿಕೊಂಡಂಥ ಅನೇಕ ಜನರನ್ನು ನಾವು ಇವತ್ತು ಕಾಣುತ್ತಿದ್ದೇವೆ. ಜೀವಂತ ಇದ್ದಾಗಲೂ ಸತ್ತ ವ್ಯಕ್ತಿಯ ಹಾಗೆ ನಡವಳಿಕೆ ಇದ್ದಂಥವರು. ಅನೇಕರು ಸಾಯುತ್ತಾರೆ. ಸರ್ವ ಸಾಮಾನ್ಯ ಜೀವನ ನಡೆಸುತ್ತಾರೆ. ಸತ್ತವನು ಸತ್ತುಹೋಗಿಬಿಡುತ್ತಾರೆ. ಆದರೆ ಕೆಲವೇ ಜನರು ಸತ್ತ ಮೇಲೂ ಸಹಿತ, ಶ್ರೇಷ್ಠತೆ ಇದ್ದಂಥ ವ್ಯಕ್ತಿಗಳ ಪೈಕಿ ಮಾನ್ಯ ಕೆ.ಹೆಚ್. ಪಾಟೀಲರು ಒಬ್ಬರು. ಅವರ ಮಾರ್ಗದರ್ಶನ, ಅವರ ಒಂದು ದಾರಿದೀಪವನ್ನು ಈ ರಾಜ್ಯದ ಆಡಳಿತ ಸುಧಾರಣೆಗೆ ಈ ಸದನ, ಈ ಸರ್ಕಾರ ಈಡೇರಿಸಿದರೆ ಅವರಿಗೆ ಶ್ರದ್ಧಾಂಜಲಿಯನ್ನು ಮನಃಪುರ್ವಕವಾಗಿ ಅರ್ಪಿಸಿದಂತಾಗುತ್ತದೆ ಎನ್ನುವ ಮಾತನ್ನು ಹೇಳಿ, ಅವರ ಕುಟುಂಬಕ್ಕೆ ಹಾಗೂ ಅವರ ಹಿತೈಷಿಗಳಿಗೆ ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸಲಿಕ್ಕೆ ಧೈರ್ಯವನ್ನು ದೇವರು ತುಂಬಲಿ. ಅವರು ಏನು ಬಿಟ್ಟುಹೋಗಿದ್ದಾರೆ. ಆ ವಿಚಾರಗಳನ್ನು ಮುಂದುವರಿಸಿಕೊಂಡು ಹೋಗಿ ಅವರ ಒಂದು ಕೀರ್ತಿಗೆ ಎಲ್ಲರೂ ಪಾತ್ರರಾಗೋಣವೆಂದು ಹೇಳಿ ಇವತ್ತು ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಬೆಂಬಲ ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ): ಮಾನ್ಯ ಅಧ್ಯಕ್ಷರೇ, ನಮ್ಮ ನಿಮ್ಮೆಲ್ಲರ ಮಿತ್ರರೂ ಹಿರಿಯರೂ ಸಹಕಾರಿ ಧುರೀಣರೂ, ಸಚಿವರೂ ಆಗಿದ್ದ ದಿವಂಗತ ಕೆ.ಹೆಚ್. ಪಾಟೀಲ ಅವರ ನಿಧನದ ಸುದ್ದಿಯನ್ನು ಕೇಳಿ ನಮಗೆಲ್ಲರಿಗೂ ಸಹ ತುಂಬಲಾರದ ಹಾನಿ ಆಗಿದೆ. ದುಃಖವಾಗಿದೆ. ಇದರ ಜೊತೆಗೆ ನನ್ನ ಪಕ್ಕದಲ್ಲಿ ಕುಳಿತಿದ್ದ ಎಂ.ಇ.ಎಸ್.ನ ಮಾನ್ಯ ಬಾಬಾ ಸಾಹೇಬ್ ರಾವ್ ಸಾಹೇಬ್ ವಾಹಗಾಂವ್‌ಕರ್ ಅವರೂ ನಿಧನರಾಗಿದ್ದಾರೆ. ವಯೋ ವೃದ್ಧರೂ, ಶಿಕ್ಷಣ ಪ್ರೇಮಿಗಳೂ ಆಗಿದ್ದ ಅವರೂ ಸಹ ನಮ್ಮನ್ನು ಆಗಲಿದ್ದು ಬಹಳ ದುಃಖ ಆಗಿದೆ. ಮಾನ್ಯ ಕೆ.ಹೆಚ್. ಪಾಟೀಲರ ಬಗ್ಗೆ ಅನೇಕ ಹಿರಿಯ ಸದಸ್ಯರುಗಳು ಅನೇಕ ವಿವರಗಳನ್ನು ಹೇಳಿದರು. ಅವರಿಗೂ ನನಗೂ ಹತ್ತು ವರ್ಷಗಳ ಸಂಬಂಧ ಇದೆ. ರಾಜಕೀಯವಾಗಿ ಯಾವುದೇ ಪಕ್ಷದಲ್ಲಿದ್ದರೂ ಸಹ ಅವರು ನನಗೆ ಗುರುಗಳು. ಅವರು ಹಾಕಿದ್ದಂತಹ ವಿಚಾರಗಳನ್ನು ಕಾರ್ಯಕ್ರಮಗಳನ್ನು ನಾವು ಇವತ್ತಿನ ದಿವಸ ನೋಡಿದ್ದೇವೆ. ಮಾನ್ಯ ಪಾಟೀಲ್ ಅವರು ಇಂದು ನಮ್ಮ ಮುಂದೆ ಇಲ್ಲದೇ ಇದ್ದರೂ ಕೂಡ ಅವರು ಮಾಡಿದಂತಹ ಪ್ರಗತಿಪರವಾದಂತಹ ಕಾರ್ಯಗಳು ನಮ್ಮ ಕಣ್ಣೆದುರು ಇದೆ. ಅವರು ಮಾಡತಕ್ಕ ವಿಚಾರಗಳಲ್ಲಿ ಕಾರ್ಯಗಳಲ್ಲಿ ಇನ್ನೂ ಕೆಲವು ಇವೆ. ಅವುಗಳನ್ನು ಮುಂದುವರೆಸಿಕೊಂಡು ಹೋಗಲಿ ಎಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರ ವಿಚಾರಗಳಿಗೆ ಪ್ರಬಲವಾದ ಶಕ್ತಿಯನ್ನು ಕೊಡಿ. ಕೆ.ಹೆಚ್. ಪಾಟೀಲರ ವಿಚಾರದ ದಾರಿಯಲ್ಲಿ ಸಹಕಾರಿ ಇಲಾಖೆ ಮುಂದುವರಿಯಲಿ ಎಂದು ಕೇಳಿಕೊಳ್ಳುತ್ತಾ ಅವರ ಒಂದು ದುಃಖದಲ್ಲಿ ಕೂಡ ನಾವೆಲ್ಲ ಭಾಗಿಗಳಾಗಿದ್ದೇವೆ. ಅವರ ಅನೇಕ ವಿಚಾರಗಳಲ್ಲಿ ಒಂದು ಮಾತನ್ನು ನಾನು ಹೇಳಬೇಕು. ಅದೇನೆಂದರೆ, 1982ನೇ ಇಸವಿಯಲ್ಲಿ ನಾನು ಹುಬ್ಬಳ್ಳಿಯ ಎಪಿಎಂಸಿಯ ಅಧ್ಯಕ್ಷನಾಗಿದ್ದೆ. ಆಗ ರೈತರು ಬೆಳೆದ ಮಾಲನ್ನು ಖರೀದಿ ಮಾಡಲು ಯಾರು ಮುಂದೆ ಬರಲಿಲ್ಲ. ಸುಮಾರು 4000 ಹತ್ತಿ ಅಂಗಡಿಗಳು ಮುಳುಗುತ್ತಿದ್ದವು. ಅಂತಹ ಸಂದರ್ಭದಲ್ಲಿ ನಾನು ಮಾನ್ಯ ಕೆ.ಹೆಚ್. ಪಾಟೀಲ್ ಅವರ ಹತ್ತಿರ ಬಂದು ವಿಷಯ ತಿಳಿಸಿದೆ. ಅವರು ಇಮ್ಮಿಡಿಯೇಟ್ ಆಗಿ ಹೆಚ್ಚಿನ ರೇಟನ್ನು ಕೊಟ್ಟು ರೈತರು ಏನು ಹತ್ತಿ ಬೆಳೆದಿದ್ದಾರೆ ಅದನ್ನು ಖರೀದಿ ಮಾಡಲು ತಮ್ಮ ಮಿಲ್ಲಿಗೆ ಹೇಳಿದರು. ಇದನ್ನು ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಅವರ ವಿಚಾರ ಏನು ಇತ್ತು ಎಂದರೆ, ರೈತರು ಏನು ಮಾಲು ಬೆಳೆಯುತ್ತಾರೆ ಅದಕ್ಕೆ ಅವರದೇ ಆದ ಫ್ಯಾಕ್ಟರಿ ಆಗಲಿ, ಸಹಕಾರಿ ತಳಹದಿಯ ಮೇಲೆ ಇರಲಿ ಎನ್ನುವ ವಿಚಾರ ಅದರಲ್ಲಿ ಅಡಗಿತ್ತು. ಈ ವಿಚಾರಗಳು ಏನು ಇದ್ದವು. ಅವನ್ನು ಮುಂದುವರಿಸುವತ್ತಾ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡಬೇಕು. ಕೆ.ಹೆಚ್. ಪಾಟೀಲರ ಒಂದು ಸ್ಮಾರಕವನ್ನು ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಅವರ ಕಛೇರಿ ಏನು ಇದೆ ಅಲ್ಲಿ ಸ್ಥಾಪಿಸಬೇಕೆಂದು ನಾನು ಎಲ್ಲರ ಪರವಾಗಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮೃತರ ಆತ್ಮಕ್ಕೆ ಗೌರವವನ್ನು ಸೂಚಿಸಲು ಸಭೆಯು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಎದ್ದುನಿಂತು ಮೃತರ ಆತ್ಮಕ್ಕೆ ಗೌರವವನ್ನು ಸೂಚಿಸಲು ಒಂದು ನಿಮಿಷ ಮೌನವನ್ನು ಆಚರಿಸಿತು)